ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ   ದರ್ಶನ   ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೫   ಜುಲೈ - ೨೦೧೫   ಸಂಚಿಕೆ - ೧೨

"ಹಿಂದ್ ಸ್ವರಾಜ್ಯದ ಕಾಲ ಮರಳಿ ಬಂದಿದೆ."

****

ನಾಯಕತ್ವದ ಸಮಾಪ್ತಿಯತ್ತ ಗಣಸೇವಕತ್ವ

****

ಹಿಂದ್ ಸ್ವರಾಜ್ ಸಮಕಾಲೀನ ಸಾಂಸ್ಕೃತಿಕ ಮನಸ್ಸು

ಜನಪದ ವಿಚಾರದಲ್ಲಿ

ಜುಲೈ -೨೦೧೫

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜುಲೈ - ೨೦೧೫
ಸಂಪುಟ - ೧೫
ಸಂಚಿಕೆ - ೧೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.net

ಪಲಾಯನ ಸೂಕ್ತ

ಓಡಿ, ಓಡಿ, ಓಡಿ,.......
ಹೆಂಗಸರೂ ಗಂಡಸರೂ
ಮುದುಕರೂ ಯುವಕರೂ
ಶಾಲೆ ಕಾಲೇಜಿನೆಲ್ಲ ಹೈಕಳೂ
ಓಡಿ, ಓಡಿ, ಓಡಿ-
ಭಾವೈಕ್ಯದ ಸಿದ್ಧಿಗಾಗಿ,
ಭಾರತದ ಸವೃದ್ಧಿಗಾಗಿ
ಸರಹದ್ದಿನ ರಕ್ಷೆಗಾಗಿ,
ಗಾಂಧೀಜಿಯ ನೆನಪಿಗಾಗಿ
ನೆಹರು ವಂಶವೃದ್ಧಿಗಾಗಿ,
ದಂಡಿಯಾತ್ರೆ ನೆನಸುವ,
ದಂಡಯಾತ್ರೆ ನಡೆಸುವ:
ಒಡತನವನು ಬುಡಮುಟ್ಟಿ
ಕಿತ್ತೆಸೆಯಲು ಓಡಿರಿ.
ಮತ ಭಾಂಡಾಗಾರದ
ಅಭಿವೃದ್ಧಿಗಾಗಿ ಓಡಿರಿ,
ಮಂದೆ ಮಂದೆಯಾಗಿ
ಸೇರಿಕೊಳ್ಳಿ ನಮ್ಮ ಸಾಲಿಗೆ
ಓಡಿ ಓಡಿ ಮುಟ್ಟಿಬಿಡಿ
ದೇಶಭಕ್ತಿ ಶಿಖರವ
ಈ ಬೀದಿಯ ಕೊನೆಗಿರುವ
ತಿಪ್ಪೆಗುಂಡಿಯಾಚೆಗೆ:
ಓಡಿ, ಓಡಿ, ಓಡಿ.

– ಗೋಪಾಲಕೃಷ್ಣ ಅಡಿಗ

ಚಿಂತನೆಗೊಂದು ಸಂಗತಿ

ಮತಾಂತರಗೊಳ್ಳುವ, ಮತಾಂತರಗೊಳಿಸುವ ಸಂಗತಿಗಳು ದಿನದ ಬಿಸಿಬಿಸಿ ಸುದ್ದಿಯಾಗುತ್ತಲಿವೆ. ವ್ಯಕ್ತಿಗತವಾಗಿರುವ ಧರ್ಮದ ವಿಷಯ ಸಾರ್ವಜನಿಕವಾಗುತ್ತಿದೆ. ಬರಬರುತ್ತಾ ರಾಜಕೀಯ ಬಿರುಗಾಳಿಗೂ ಸಿಕ್ಕಿಕೊಳ್ಳುತ್ತಿದೆ. ಇದರ ಪರಿಣಾಮ ರಾಷ್ಟ್ರದ ರಾಜಕಾರಣದ ಮೇಲೂ ಮತ್ತು ಅಂತರರಾಷ್ಟ್ರೀಯ ರಾಜಕಾರಣದ ಮೇಲೂ ಉಂಟಾಗುತ್ತಿದೆ. ಭಾರತ ಮತ್ತು ಪಾಕಿಸ್ತಾನದ ವಿದೇಶಾಂತ ನೀತಿಯೂ ಪ್ರಭಾವಿತವಾಗುತ್ತಿದೆ. ಕಾಶ್ಮೀರ ಸಮಸ್ಯೆ ಜಟಿಲವಾಗುತ್ತಿದೆ. ಧರ್ಮ ಮತ್ತು ಧರ್ಮಾಂತರದಂಥ ವಿಷಯವನ್ನು ಕಾಲ್ಚೆಂಡಿನಾಟದಂಥ ವಿಷಯವನ್ನಾಗಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಎಲ್ಲ ಧರ್ಮಗಳ ಧರ್ಮಾಧಿಕಾರಿಗಳು ಚಿಂತಿಸಬೇಕು. ಮತ್ತು ತಮ್ಮ ಧರ್ಮಾನುಯಾಯಿಗಳಲ್ಲಿ ಜಾಗೃತಿ ಮೂಡಿಸಬೇಕು. ಜಗತ್ತಿನಲ್ಲಿರುವ ಎಲ್ಲ ಧರ್ಮಗಳ ಮೂಲವಿಚಾರ ಪವಿತ್ರವಾಗಿದೆ, ಮಾನವನ ಏಳಿಗೆಯ ಉದ್ದೇಶವೇ ಪ್ರಮುಖವಾಗಿದೆ. ಬಲ್ಲವರು ಹೇಳುವಂತೆ ಪರಮಾತ್ಮನೊಬ್ಬನೆ. ವಿವಿಧ ಧರ್ಮಗಳು ಅವನ ಬಳಿಗೆ ಹೋಗಲು ಇರುವ ದಾರಿಗಳು ಮಾತ್ರ. ಒಂದು ಧರ್ಮ ಬೇರೊಂದಕ್ಕಿಂತ ಉತ್ತಮವಾಗಿದೆ ಎಂದು ತೀರ್ಮಾನಕ್ಕೆ ಬರಬೇಕಾದರೆ ಆ ವ್ಯಕ್ತಿ ಎರಡೂ ಧರ್ಮಗಳ ಸಾಹಿತ್ಯ ಮತ್ತು ಆಧ್ಯಾತ್ಮಿಕತೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿರಬೇಕು. ಇದು ಸುಲಭ ಸಾಧ್ಯ ಕೆಲಸವಲ್ಲ. ಜನಸಾಮಾನ್ಯರ ಶಕ್ತಿ ಮೀರಿದಂಥದು. ಇಂಥದೇ ಒಂದು ಪ್ರಸಂಗ ಗಾಂಧೀಜಿಯವರ ಜೀವನದಲ್ಲಿ ಬಂದುದನ್ನು ತಮ್ಮ ಆತ್ಮಕಥೆಯಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ. "ಕ್ರೈಸ್ತ ಧರ್ಮವನ್ನು ನಾನು ಎಷ್ಟರಮಟ್ಟಿಗೆ ಅಭ್ಯಾಸ ಮಾಡಬಹುದು, ಹಿಂದೂಧರ್ಮವನ್ನು ಕುರಿತ ಪುಸ್ತಕಗಳು ನಮಗೆ ಸಿಕ್ಕುವುದು ಹೇಗೆ? ನನ್ನ ಸ್ವಂತ ಧರ್ಮವನ್ನು ಚೆನ್ನಾಗಿ ತಿಳಿದುಕೊಂಡ ಹೊರತು ಕ್ರೈಸ್ತಧರ್ಮವನ್ನು ಸರಿಯಾಗಿ ತಿಳಿಸುಕೊಳ್ಳಲು ಸಾಧ್ಯವೆ ಎಂದೆಲ್ಲಾ ಯೋಚಿಸಿ ಕೊನೆಗೆ ಒಂದು ತೀರ್ಮಾನಕ್ಕೆ ಬಂದೆ. ನಾನು ನಿಷ್ಪಕ್ಷಪಾತವಾಗಿ ಎಲ್ಲಧರ್ಮಗಳ ವ್ಯಾಸಂಗವನ್ನು ಮಾಡಬೇಕು. ನಂತರ ಪರಮಾತ್ಮನ ಪ್ರೇರಣೆಯಂತೆ ನಡೆಯಬೇಕು. ನನ್ನ ಧರ್ಮವನ್ನು ಪೂರ್ಣವಾಗಿ ಅಧ್ಯಯನ ಮಾಡಿ ತಿಳಿದುಕೊಂಡಲ್ಲದೆ ಮತ್ತೊಂದು ಧರ್ಮವನ್ನು ಸ್ವೀಕರಿಸುವ ವಿಷಯವನ್ನು ಯೋಚಿಸಕೂಡದು" ಹೀಗೆ ವಿಚಾರಮಾಡುತ್ತಾ ನಾನು ನಿದ್ರೆಹೋದೆ.

"ಹಿಂದ್ ಸ್ವರಾಜ್ಯದ ಕಾಲ ಮರಳಿ ಬಂದಿದೆ."

– ಸುರೇಂದ್ರ ಕೌಲಗಿ

೯೬ ವರ್ಷಗಳ ಹಿಂದೆ ೧೯೧೯ರಲ್ಲಿ ಗಾಂಧೀಜಿ "ಹಿಂದ್ ಸ್ವರಾಜ್" ಪುಸ್ತಕ ಬರೆದಾಗ ಭಾರತದಲ್ಲಿ ಯಾವ ಪ್ರಕಾರದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಇತ್ತೊ ಅಂಥದೆ ಪರಿಸ್ಥಿತಿ ೨೦೧೫ನೇ ಇಸವಿಯಲ್ಲಿ ಇದೆ. ಒಂದು ರೀತಿಯಲ್ಲಿ ಹಿಂದ್ ಸ್ವರಾಜ್ ಬರೆಯಲ್ಪಟ್ಟ ಕಾಲ ಮರುಕಳಿಸಿದೆ ಎಂಬ ಭಾವನೆ ಉಂಟಾಗುತ್ತಿದೆ.

ತುರ್ತು ಪರಿಸ್ಥಿತಿಯನ್ನು ದೇಶ ಅನುಭವಿಸಿ ಕೇವಲ ನಲ್ವತ್ತು ವರ್ಷಗಳು ಮಾತ್ರ ಕಳೆದಿವೆ. ಆದರೆ ಲಾಲ್‌ಕೃಷ್ಣ ಅಡ್ವಾಣಿಯಂಥಹ ಪ್ರಬುದ್ಧ ರಾಜಕಾರಣಿ ತಮ್ಮದೇ ಪಕ್ಷದ ಆಡಳಿತಾವಧಿಯಲ್ಲಿ ತುರ್ತುಪರಿಸ್ಥಿತಿಯನ್ನು ಜ್ಞಾಪಿಸಿಕೊಳ್ಳುವ ಸನ್ನಿವೇಶ ದೇಶದಲ್ಲಿ ಇದೆ ಎಂದು ಭಾವಿಸುವುದಾದರೆ ಗಾಂಧಿ ಪ್ರಣಾಳಿಕೆಯಂದೇ ಪ್ರಸಿದ್ಧವಾದ ಹಿಂದ್‌ಸ್ವರಾಜ್‌ದಲ್ಲಿಯ ಮೂಲ ಆಶಯಗಳಿಗೆ ವಿರೋಧವಾದ ಪರಿಸ್ಥಿತಿ ದೇಶದಲ್ಲಿ ನಿರ್ಮಾಣವಾಗುತ್ತಿದೆ. ದೇಶದ ಅಂದಿನ ಸ್ಥಿತಿಯನ್ನು ನೋಡಿ ಗಾಂಧೀಜಿ ಅನುಭವಿಸಿದ್ದ ತೀವ್ರ ಆತಂಕವನ್ನು ಜನರು, ಅದರಲ್ಲಿಯೂ ಮುಖ್ಯವಾಗಿ ಜೀವಕುಲ ಹಾಗೂ ಸಸ್ಯಕುಲ ಉಳಿಸಲು ಪ್ರಯತ್ನಿಸುತ್ತಿರುವ ಜನರಿಗೆ ಹೆಚ್ಚು ಆತಂಕ ಉಂಟಾಗಿದ್ದರೆ ಆಶ್ಚರ್ಯಪಡಬೇಕಾಗಿಲ್ಲ.

ಪಶ್ಚಿಮ ದೇಶಗಳ ಯಾವ ಸಂಸ್ಕೃತಿಯನ್ನು ಗಾಂಧೀಜಿಯವರು ನೋಡಿ, ಅಲ್ಲಿಯ ಜೀವನವನ್ನು ಅನುಭವಿಸಿ, ಸೈತಾನನ ಸಂಸ್ಕೃತಿಯೆಂದು ಕರೆದಿದ್ದರೊ ಅಂಥ ಸಂಸ್ಕೃತಿಯನ್ನು ಭಾರತ ತನ್ನ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಅಪ್ಪಿಕೊಳ್ಳುತ್ತಿದೆ. ಇದರಿಂದಾಗಿ ದೇಶದ ಅಸ್ಮಿತೆ ಕಳೆದುಹೋಗುತ್ತಿದೆ. ಶಿಕ್ಷಣ ಕ್ಷೇತ್ರವಿರಲಿ, ಕೈಗಾರಿಕಾ ಕ್ಷೇತ್ರವಿರಲಿ ಅಥವಾ ಸಾಮಾಜಿಕ ಕ್ಷೇತ್ರವಿರಲಿ ಅಲ್ಲೆಲ್ಲಾ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ ಢಾಳವಾಗಿ ಕಾಣುತ್ತಿದೆ.

ಶಿಕ್ಷಣ ಬಹು ದುಬಾರಿಯಾಗಿದೆ. ಶಿಕ್ಷಣವು ಸಮಾಜದಲ್ಲಿ ವಿವಿಧ ವರ್ಗಗಳನ್ನು ನಿರ್ಮಿಸುತ್ತಿದೆ. ಬೇರೊಂದು ರೂಪದಲ್ಲಿ ವರ್ಣ ವ್ಯವಸ್ಥೆ ಜಾರಿಗೆ ಬರುವಂತೆ ಮಾಡಿದೆ. ಆರೋಗ್ಯ ಸಂರಕ್ಷಣೆ ಎಷ್ಟು ದುಬಾರಿಯಾಗಿದೆಯೆಂದರೆ ಬಡವರು ಆಸ್ಪತ್ರೆಯ ಖರ್ಚನ್ನು ಭರಿಸಲಾಗದೆ ಸತ್ತು ಹೋಗುವುದೇ ಲೇಸು ಎಂಬ ತೀರ್ಮಾನಕ್ಕೆ

ಬರುವಂತಾಗಿದೆ. ಡಾಕ್ಟರು ರೋಗಿಗಿಳ ಸೇವಕರಾಗುವ ಬದಲು ಶೋಷಕರಾಗುತ್ತಿದ್ದಾರೆ.

ನ್ಯಾಯಸ್ಥಾನಗಳ ಬಗ್ಗೆ ಜನರು ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಇಂದಿನ ಲಾಯರರು ಹಿಂದ್ ಸ್ವರಾಜ್ಯದಲ್ಲಿ ಲಾಯರರ ಬಗ್ಗೆ ಬರೆದ ಮಾತುಗಳಿಗಿಂತ ಯಾವುದೇ ರೀತಿಯಲ್ಲಿ ಭಿನ್ನರಾಗಿಲ್ಲ. ಇಂದಿಗೂ ಅವರಿಂದ ಕಕ್ಷಿದಾರರ ಅದೇ ಶೋಷಣೆ ಮತ್ತು ಮಾರ್ಗ ತಪ್ಪಿಸುವಿಕೆ ಮುಂತಾದವುಗಳು ನಡೆಯುತ್ತಿವೆ. ನ್ಯಾಯಾಧೀಶರು ಭ್ರಷ್ಟರಾಗಿದ್ದಾರೆ. ತನ್ನ ಸ್ವತಂತ್ರ ಅಸ್ತಿತ್ವವನ್ನು ನ್ಯಾಯಾಂಗ ಕಳೆದುಕೊಳ್ಳುತ್ತಿದೆ.

ಗಾಂಧೀಜಿಯವರು ಹಿಂದ್ ಸ್ವರಾಜ್ಯವನ್ನು ಭಯೋತ್ಪಾದನೆ ಮತ್ತು ರಾಜಕೀಯ ಹಿಂಸಾಚಾರದ ಕಡೆಗೆ ಹೆಚ್ಚಾಗಿ ಆಕರ್ಷಿತರಾಗಿದ್ದಂಥ ಭಾರತೀಯರನ್ನು ಕುರಿತು ಮತ್ತು ತೀವ್ರ ಪುರೋಗಾಮಿಗಳು ಹಾಗೂ ಮಂದಗತಿಯುಳ್ಳ ಭಾರತೀಯರನ್ನು ಕುರಿತು ಬರೆದಿದ್ದಾರೆ. ಭಯೋತ್ಪಾದನೆ ಮತ್ತು ರಾಜಕೀಯ ಹಿಂಸಾಚಾರ ದೇಶದಲ್ಲಿ ಹೆಚ್ಚಾಗುತ್ತಿರುವ ಈ ಕಾಲದಲ್ಲಿ ಗಾಂಧೀಜಿಯವರ ವಿಚಾರಗಳು ಮನನೀಯವಾಗಿವೆ.

ಭಯೋತ್ಪಾದನೆಯಿಂದಾಗಲಿ ಮತ್ತು ಯಾವುದೇ ಪ್ರಕಾರದ ರಾಜಕೀಯ ಹಿಂಸಾಚಾರದಿಂದಾಗಲಿ ದೇಶದ ಮುಂದಿರುವ, ತೊಡಕಾದ ಯಾವುದೇ ಸಮಸ್ಯೆಯ ಬಗೆಹರಿಸಲು ಸಾಧ್ಯವಿಲ್ಲ. ಸ್ವಾತಂತ್ರ್ಯ ಬಂದಾದ ಮೇಲೆ ದೇಶದಲ್ಲಿ ಕೋಮುಸೌಹಾರ್ದತೆ ಗಟ್ಟಿಯಾಗಿ ಬೇರೂರಬೇಕಾಗಿತ್ತು. ಆದರೆ ಕೋಮುಸೌಹಾರ್ದತೆ ದಿನಕಳೆದಂತೆ ತುಂಬ ನಾಜೂಕಾಗುತ್ತಿದೆ. ಯಾವುದೇ ಒಂದು ಸಣ್ಣ ಘಟನೆ ದೇಶದ ಯಾವುದೋ ಒಂದು ಭಾಗದಲ್ಲಿ ಸಂಭವಿಸಿದರೆ ಅದು ವಿಸ್ತಾರವಾದ ಗಲಭೆಗೆ, ಹಿಂಸಾಚಾರಕ್ಕೆ ಮತ್ತು ಆಸ್ತಿಪಾಸ್ತಿ ನಾಶಕ್ಕೆ ಕಾರಣವಾಗುತ್ತದೆ. ಸಂವಿಧಾನದ ಆಶಯವಾದ ಜಾತ್ಯಾತೀತತೆಯನ್ನು ಗಟ್ಟಿಗೊಳಿಸಲು ಮುಖ್ಯವಾಗಿ ರಾಜಕೀಯ ಪಕ್ಷಗಳು ಕೆಲಸಮಾಡಬೇಕಿದೆ. ಕೋಮುವಾದಕ್ಕೆ ರಾಜಕೀಯ ಬೆರೆತದ್ದರಿಂದಲೇ ದೇಶವು ಇಬ್ಭಾಗವಾಯಿತು. ಕೋಮುವಾದ ಎಂಬ ಮಾತೆ ಇರದಂಥ ಸಮಾಜವನ್ನು ನಿರ್ಮಿಸುವ ಕೆಲಸವನ್ನು ಪ್ರತಿಯೊಬ್ಬರೂ ಮಾಡಬೇಕಿದೆ. ಕೋಮುವಾದ ಎಂಬ ಪದಗುಚ್ಛಕ್ಕೆ ಬದಲಾಗಿ ಸೌಹಾರ್ದತಾವಾದ ಎಂಬ ಪದಗುಚ್ಛ ಬಳಕೆಗೆ ಬರುವಂತೆ ಮಾಡಬೇಕಿದೆ. ಏಕೆಂದರೆ ಗಾಂಧೀಜಿಯವರ ಸ್ವರಾಜ್ಯದ ಕಲ್ಪನೆ ಕೇವಲ ಸ್ವಆಡಳಿತ ಎಂಬುದಾಗಿರದೆ ಸ್ವಸುಧಾರಣೆ ಎಂಬುದಾಗಿದೆ. ಸ್ವರಾಜ್ಯದಲ್ಲಿ ಪ್ರತಿಯೊಬ್ಬನೂ ತನ್ನ ಜೀವನವನ್ನು ಪರಿಶುದ್ಧಗೊಳಿಸುತ್ತ ಹೋಗಬೇಕೆಂಬ ಆಶಯಅದರದ್ದಾಗಿದೆ. ವ್ಯಕ್ತಿಯ ವಿಚಾರ ಹೆಚ್ಚು ಪರಿಪಕ್ವಗೊಳ್ಳುತ್ತಾ ಹೋದಲ್ಲಿ ಎಲ್ಲ ಜನಾಂಗಗಳ ಮಧ್ಯೆ ಸೌಹಾರ್ದತೆ ತಾನೇ ತಾನಾಗಿ ಉಂಟಾಗುತ್ತದೆ.

"ಆಧುನಿಕ ನಾಗರೀಕತೆ" ಯು ವಸಾಹತುಶಾಹಿಗಿಂತಲೂ ಹೆಚ್ಚು ಅಪಾಯಕಾರಿಯಾಗಿದೆ ಎಂದು ಗಾಂಧೀಜಿ ತಿಳಿದಿದ್ದರು. ಒಂದು ರೀತಿಯಲ್ಲಿ ವಸಾಹತುಶಾಹಿ ಆಧುನಿಕ ನಾಗರೀಕತೆಯ ಉತ್ಪನ್ನವೇ ಆಗಿದೆ. ವಸಾಹತುಶಾಹಿ

ದೇಶದ ಬ್ರಿಟೀಷ್ ಜನಾಂಗವನ್ನು ಅಹಿಂಸೆಯ ಬೃಹತ್ ಶಕ್ತಿಸಂದೇಶವನ್ನು ಸಾರಲು ಉಪಯೋಗಿಸಿಕೊಳ್ಳಬೇಕೆಂಬುದೇ ಗಾಂಧೀಜಿ ಹಿಂದ್ ಸ್ವರಾಜ್ ಬರೆಯಲು ಮುಖ್ಯ ಕಾರಣವಾಗಿತ್ತೆಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳುವುದು ಅಗತ್ಯ. ಆಧುನಿಕ ನಾಗರೀಕತೆಯೇ ಇಂದಿನ ಭಯಾನಕ ಶಸ್ತ್ರಾಸ್ತ್ರಗಳ ಉತ್ಪಾದನೆಗೆ ಮತ್ತು ಸಂಗ್ರಹಕ್ಕೆ ಕಾರಣವಾಗಿದೆ. ಪ್ರತಿಯೊಂದು ದೇಶದ ಬಜೆಟ್ಟಿನಲ್ಲಿ ಸಿಂಹಪಾಲು ಸೇನೆಯ ಖರ್ಚಿಗಾಗಿ ಹಾಗೂ ಶಸ್ತ್ರಾಸ್ತ್ರಗಳ ಉತ್ಪಾದನೆ ಮತ್ತು ಸಂಗ್ರಹಕ್ಕಾಗಿಯೇ ಮೀಸಲಾಗುತ್ತಿದೆ. ಈ ವಿಷಯದಲ್ಲಿ ಭಾರತ ಯಾವ ದೃಷ್ಟಿಯಿಂದಲೂ ಹಿಂದೆ ಬಿದ್ದಿಲ್ಲ. ತಾಂತ್ರಿಕತೆಗೆ ಮತ್ತು ವಿಜ್ಞಾನದ ನಿರಂತರ ಬೆಳವಣಿಗೆ ಕೂಡ ಆಧುನಿಕ ನಾಗರೀಕತೆಯ ಫಲವೇ ಆಗಿದೆ. ತಾಂತ್ರಿಕತೆ ಮತ್ತು ವಿಜ್ಞಾನ ಬೆಳೆದಂತೆಲ್ಲ ಪಂಚಭೂತಗಳು ಮಲಿನಗೊಳ್ಳುತ್ತಿವೆ. ಸಸ್ಯಕುಲ, ಪ್ರಾಣಿಕುಲ ಮತ್ತು ಮನುಕುಲದ ಅಸ್ತಿತ್ವಕ್ಕೆ ಅಪಾಯ ಉಂಟಾಗುತ್ತಿವೆ. ತೀವ್ರಗತಿಯಲ್ಲಿ ಪ್ರಕೃತಿಯ ವಿನಾಶವಾಗುತ್ತಿದೆ. ಪ್ರಕೃತಿಯ ಮತ್ತು ಪರಿಸರದ ವಿನಾಶಕ್ಕೆ ಮುಖ್ಯ ಕಾರಣ ಆಧುನಿಕ ನಾಗರೀಕತೆ ಬಯಸುತ್ತಿರುವ ಭೌತಿಕ ಅಭಿವೃದ್ಧಿ. ಯಾವುದೇ ಭೌತಿಕ ಅಭಿವೃದ್ಧಿಯೊಂದಿಗೆ ಜನರಲ್ಲಿ ನೈತಿಕ ಅಭಿವೃದ್ಧಿಯೂ ಆಗಬೇಕಾದದ್ದು ಅಗತ್ಯ. ನೈತಿಕತೆಯೊಂದಿಗೆ ಇಲ್ಲದಿರುವ ಭೌತಿಕ ಅಭಿವೃದ್ಧಿ ವರವಾಗುವ ಬದಲು ಶಾಪವಾಗುತ್ತದೆ. ಭೌತಿಕ ಮತ್ತು ಆರ್ಥಿಕ ಅಭಿವೃದ್ಧಿಯ ಹಿಂದೆ ಧನದಾಸೆಯೇ ಮುಖ್ಯವಾಗಿರುತ್ತದೆ. ಈಗ ದೇಶದಲ್ಲಿ ತ್ವರಿತ ಮತ್ತು ಶೀಘ್ರತಮ ಸಾರಿಗೆ ವ್ಯವಸ್ಥೆಯ ಹಿಂದಿರುವ ಉದ್ದೇಶವೂ ಹೆಚ್ಚು ಹಣ ಸಂಪಾದನೆಯದೇ ಮುಖ್ಯ. ಇಂಥ ವಿನಾಶಕಾರಿ ನವ ನಾಗರೀಕತೆಯನ್ನು ಮಹಾತ್ಮ ಗಾಂಧಿ ತಮ್ಮ ಹಿಂದ್ ಸ್ವರಾಜ್ಯದ ಮೂಲಕ ಸುಮಾರು ೯೭ ವರ್ಷಗಳ ಹಿಂದೆಯೇ ವಿರೋಧಿಸಿದ್ದಾರೆ. ಆಗ ಈಗಿನಷ್ಟು ವಿಜ್ಞಾನವಾಗಲಿ, ತಂತ್ರಜ್ಞಾನವಾಗಲಿ, ಸಾರಿಗೆ ಸಂಪರ್ಕಗಳಾಗಲಿ, ಶಿಕ್ಷಣ ಕ್ಷೇತ್ರವಾಗಲಿ, ಕೈಗಾರಿಕಾ ಕ್ಷೇತ್ರವಾಗಲಿ ಮತ್ತು ಜನಸಂಖ್ಯೆಯಾಗಲಿ ಬೆಳೆದಿರಲಿಲ್ಲ. ಸಣ್ಣ ಪ್ರಮಣದಲ್ಲಿದ್ದ ಜನಸಂಖ್ಯೆಯ ಕಾಲದಲ್ಲಿಯೇ ಕೈಗಾರಿಕೀಕರಣದ ಪರಿಣಾಮವನ್ನು ಖುದ್ದಾಗಿ ನೋಡಿ ಮತ್ತು ಅನುಭವಿಸಿ ನವ ನಾಗರೀಕತೆಯನ್ನು ಖಂಡಿಸಿ ಬರೆದ ಹಿಂದ್ ಸ್ವರಾಜ್ಯದ ಕಾಲ ಈಗ ಸಹಸ್ರ ಸಮಸ್ಯೆಗಳೊಂದಿಗೆ ಮರುಕಳಿಸಿದೆ.

ಆಧುನಿಕ ನಾಗರೀಕತೆಯಿಂದ ಉಂಟಾಗಿರುವ ಸಮಸ್ಯೆಗಳ ಪರಿಹಾರಕ್ಕೆ ಗಾಂಧೀಜಿ ಸೂಚಿಸಿರುವ ಮಾರ್ಗಗಳೂ ಆ ಪರಿಹಾರೋಪಾಯದ ವಿಚಾರಗಳೂ ಮರುಕಳಿಸಿವೆ.

ಹಿಂದ್ ಸ್ವರಾಜ್ ಪ್ರಬಂಧ ಬರೆಯುವ ಕಾಲಕ್ಕೆ ಗಾಂಧೀಜಿಯವರ ಮನಸ್ಸಿನಲ್ಲಿ ಇದ್ದದ್ದು ಭಾರತೀಯರ ನೈತಿಕ ಪುನರುಜ್ಜೀವನಕ್ಕಾಗಿ ದಾರಿ ತೋರಿಸಬೇಕೆಂಬುದಾಗಿತ್ತು. ಈಗ ಆ ಕೆಲಸ ತೀವ್ರ ಗತಿಯಲ್ಲಿ ನಡೆಯಬೇಕಾದ ಕಾಲ ಬಂದಿದೆ. ಸಮಾಜದ

ಹಿಂದುಳಿದವರ ಮೇಲೆ, ಮಃಇಳೆಯರ ಮೇಲೆ ಮತ್ತು ಮಕ್ಕಳ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಿವೆ. ಸುಶಿಕ್ಷಿತರೆಂದು ಕರೆಯಲ್ಪಡುವ ಜನರೆ ದುರ್ಬಲರನ್ನು ಶೋಷಣೆ ಮಾಡುತ್ತಿದ್ದಾರೆ ಮತ್ತು ಭ್ರಷ್ಟಾಚಾರಕ್ಕಿಳಿದ್ದಿದ್ದಾರೆ. ವಿದ್ಯಾರ್ಥಿಗಳಲ್ಲಿ ಮತ್ತು ಶಿಕ್ಷಕರಲ್ಲಿ ನೈತಿಕ ಮಟ್ಟ ಕುಸಿಯುತ್ತಿದೆ. ವಿಶ್ವವಿದ್ಯಾನಿಲಯಗಳಲ್ಲಿ ಅನೈತಿಕತೆ ಹೆಚ್ಚಾಗಿದೆ. ಇಂಥ ಸಂದರ್ಭದಲ್ಲಿ ಗಾಂಧೀಜಿ ಬಯಸಿದ್ದ ಭಾರತೀಯರ ನೈತಕ ಪುಸರುಜ್ಜೀವನದ ಕೆಲಸವನ್ನು ದೇಶದ ನೇತಾರರು ಮಾಡಬೇಕಿದೆ. ಈ ಕ್ಷೇತ್ರದಲ್ಲಿ ನೈಜ ಧಾರ್ಮಿಕ ಮುಖಂಡರ ಪಾತ್ರ ಬಹಳ ಹಿರಿದಾಗಿದೆ. ಭಾರತ ತನ್ನ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲು ತನ್ನದೇ ಆದ ಮತ್ತು ಉತ್ತಮ ದರ್ಜೆಯ ಸಾಧನ ಹೊಂಡಬೇಕು.ಆದರೆ ಈ ನಿಟ್ಟಿನಲ್ಲಿ ದೇಶದ ಬುದ್ಧಿಜೀವಿಗಳು, ಆಧ್ಯಾತ್ಮಿಕ ಪುರುಷರು, ರಾಜಕೀಯ ಧುರೀಣರು ಮತ್ತು ಶಿಕ್ಷಣ ತಜ್ಞರು ಚಿಂತನೆ ಮಾಡುತ್ತಿಲ್ಲ. ಈ ಕೆಲಸ ತುರ್ತಾಗಿ ಆಗಬೇಕೆಂಬುದೇ ಹಿಂದ್ ಸ್ವರಾಜ್ಯದ ಕರೆಯಾಗಿದೆ.

ದೇಶದ ಮುಂದಿರುವ ಇಂದಿನ ಅನೇಕ ಸಮಸ್ಯೆಗಳಿಗೆ ಇಂಗ್ಲೀಷರ ಆಡಳಿತದ ಕಾರಣಕ್ಕಿಂತಲೂ ಭಾರತೀಯರೆ ಆಧುನಿಕ ಮೋಹಕ್ಕೆ ಬಿದ್ದಿರುವುದೇ ಕಾರಣವಾಗಿದೆ. ಗಾಂಧೀಜಿ ಹಿಂದ್ ಸ್ವರಾಜ್ಯದ ಮೂಲಕ ಭಾರತೀಯತೆಯನ್ನು ಎತ್ತಿಹಿಡಿಯಲು ಪ್ರಯತ್ನಿಸಿದ್ದಾರೆ. ಆ ಭಾರತೀಯತೆ ಸಂಕುಚಿತವಾದಂಥದ್ದು ಆಗಿರದೆ ಇಡೀ ವಿಶ್ವಸಮುದಾಯದ ಹಾಗೂ ಸಮಸ್ತ ಪ್ರಾಣಿಕುಲದ ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ಹಿತಸಾಧನೆ ಬಯಸುತ್ತದೆ. ಆದರೆ ನವ ನಾಗರೀಕತೆ ಅದರೊಂದಿಗಿರುವ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ಅರ್ಥಶಾಸ್ತ್ರ ಇದಕ್ಕೆ ಅವಕಾಶಕೊಡುತ್ತಿಲ್ಲ. ಈ ಬಗ್ಗೆ ಪುನರ್‌ವಿಚಾರ ಮಾಡಬೇಕಾದ ಸಮಯ ಬಂದಿದೆ.

ಗಾಂಧೀಜಿ ರೈತನ ಮತ್ತು ಕರಕುಶಲಿಯ ಜೀವನವೇ ನಿಜವಾದ ಜೀವನವೆಂದು ಹೇಳಿದ್ದರು. ಶ್ರಮನಿಷ್ಟ ಜೀವನವೇ ಅದ್ವಿತೀಯವಾದುದೆಂದೂ ಹೇಳಿದ್ದರು. ಆದರೆ ಈಗ ಸರಕಾರದ ನೀತಿ ಇದಕ್ಕೆ ವಿರುದ್ಧವಾಗಿದೆ. ನಗರೀಕರಣದ ಭಾರಾಟೆಯಲ್ಲಿ ರೈತರು ವ್ಯವಸಾಯ ಮತ್ತು ಕರಕುಶಲಗಳನ್ನು ತ್ಯಜಿಸಿ ನಗರಕ್ಕೆ ವಲಸೆ ಹೋಗುತ್ತಿದ್ದಾರೆ. ಹಳ್ಳಿಗರಲ್ಲಿ ನಗರವಾಸಿಗಳ ಮನೋಭಾವವೇ ಮೂಡುತ್ತಿದೆ. ಆದ್ದರಿಂದ ಅವು 'ನಗರಳ್ಳಿ' ಯಾಗಿ ಪರಿವರ್ತಿತಗೊಳ್ಳುತ್ತಿವೆ. ಈ ಎಲ್ಲ ಪ್ರಕಾರದ ಅಧೋಗತಿಯನ್ನು ತಡೆಯಲು ಸೂಕ್ತ ಉಪಕ್ರಮಗಳನ್ನು ಕೈಗೊಳ್ಳುವಂತೆ ಹಿಂದ್ ಸ್ವರಾಜ್ ಪ್ರೇರೇಪಿಸುತ್ತದೆ.

ನಾಯಕತ್ವದ ಸಮಾಪ್ತಿಯತ್ತ ಗಣಸೇವಕತ್ವ

ಮೂಲ - ವಿನೋಬಾ ಅನು - ಸುರೇಂದ್ರ ಕೌಲಗಿ

(ಇತ್ತೀಚೆಗೆ ಮುಗಿದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಕೆಲವರು ಸರ್ವ ಸಮ್ಮತಿಯಿಂದ ಆಯ್ಕೆಯಾಗಿ ಬಂದಿದ್ದಾರೆ. ಆ ಪ್ರಕಾರದ ಚುನಾವಣೆ ಗ್ರಾಮದಲ್ಲಿ ಹೊಸ ಶಕ್ತಿ ಸಂಚಾರಕ್ಕೆ ಕಾರಣವಾಗಬಹುದೆ ಎಂಬುದನ್ನು ಕಾದು ನೋಡಬೇಕಿದೆ ಮತ್ತು ಪ್ರಜಾಪ್ರಭುತ್ವದ ಬೆಳವಣಿಗೆಯ ದೃಷ್ಟಿಯಿಂದ ಅಧ್ಯಯನ ಅಥವಾ ಸಂಶೋಧನಾ ಯೋಗ್ಯ ವಿಷಯವೂ ಆಗಿದೆ. ಇನ್ನು ಏಕ ವ್ಯಕ್ತಿಯ ನಾಯಕತ್ವ ಮುಗಿಯಿತು. ಸಾಮೂಹಿಕ ನೇತೃತ್ವದ ಕಾಲ ಬಂದಿದೆ. ಈ ಬಗ್ಗೆ ಸಾಮೂಹಿಕ ನೇತೃತ್ವ ಅಥವಾ ಗಣಸೇವಕತ್ವ ಕುರಿತು ಶ್ರೇಷ್ಠ ಸರ್ವೋದಯ ನಾಯಕ ಆಚಾರ್ಯ ವಿನೋಬಾ ಭಾವೆಯವರ ವಿಚಾರಗಳನ್ನು ಮನನಕ್ಕಾಗಿ ಇಲ್ಲಿ ಪ್ರಸ್ತುತಪಡಿಸಲಾಗಿದೆ - ಸಂ)

ಯಾವುದೇ ಒಬ್ಬ ವ್ಯಕ್ತಿಯ ಮಸ್ತಿಷ್ಕದಲ್ಲಿ ಅಥವಾ ತಲೆಯಲ್ಲಿ ವಿಶೇಷ ವಿಚಾರಗಳ ದರ್ಶನ ದೈವೀಕೃಪೆಯಿಂದ ಆಗುತ್ತದೆಂಬ ಮಾತು ಯುಗಯುಗಗಳಿಂದ ನಡೆದು ಬಂದಿದೆ. ಆದರೆ ವಿಚಾರ ದರ್ಶನದ ಜೊತೆಯಲ್ಲಿ ಒಬ್ಬ ನಾಯಕ ಕೂಡ ಇರಬೇಕೆಂಬ ಪರಂಪರೆ ಈ ದಿನದವರೆಗೆ ಇದೆ. ನಾನು ಆ ಪರಂಪರೆಯನ್ನೇ ಮುರಿಯ ಬಯಸುತ್ತೇನೆ. ಮಿತ್ರ-ಸಮಾಜವನ್ನು ರಚಿಸಬಯಸುತ್ತೇನೆ. ನಾನು ದೇವರಲ್ಲಿ ಮಿತ್ರ ಭಕ್ತಿಯನ್ನೇ ಮಾಡಬಯಸುತ್ತೇನೆ. ಆದ್ದರಿಂದ ನಾಯಕತ್ವದ ಅವಶ್ಯಕತೆಯನ್ನೇ ಸಮಾಪ್ತಮಾಡುವ ಪ್ರಕ್ರಿಯೆಯನ್ನು ಹುಡುಕುತ್ತಿದ್ದೇನೆ. ಈ ಹುಡುಕಾಟ ನನ್ನದಾಗಿದೆ. ನನಗೆ ಕೆಲ ಶಬ್ದಗಳು ಹೊಳೆದವು. ಅವುಗಳಲ್ಲಿ ಒಂದು ಶಬ್ದ ಗಣಸೇವಕತ್ವ, ಕಾಂಚಿವರಂದಲ್ಲಿ ನಡೆದ ಸರ್ವೋದಯ ಸಮ್ಮೇಳನದಲ್ಲಿ ಮೊದಲ ಬಾರಿಗೆ ಗಣಸೇವಕತ್ವದ ಶಬ್ದ ಇಟ್ಟಿದ್ದೆ. ಜಗತ್ತಿನಲ್ಲಿ ಶಬ್ದವೇ ಕೆಲಸ ಮಾಡುತ್ತದೆ. ಮನುಷ್ಯನಿಗೆ ಪ್ರೇರಣೆಕೊಡುವಂಥ ಕೆಲ ಶಬ್ದಗಳಿರುತ್ತವೆ. ಅವು ಮನುಷ್ಯನಿಂದ ಕೆಲಸಮಾಡಿಸಿಕೊಳ್ಳುತ್ತವೆ. ಒಂದು ಯುಗದಲ್ಲಿ ಒಂದು ಶಬ್ದ ಸಮಾಜಕ್ಕೆ ದೊರೆಯುತ್ತದೆ. ಉದಾಹರಣೆಗೆ "ಕ್ವಿಟ್ ಇಂಡಿಯಾ". ಈ ಶಬ್ದ ಹುಟ್ಟಿತು ಮತ್ತು ಇಡೀ ಭಾರತವನ್ನು ಆವರಿಸಿತು ಮತ್ತು ಉದ್ದೇಶಿತ ಕೆಲಸ ನಡೆದು ಹೋಯಿತು.

ಗಣ ಸೇವಕತ್ವ ಎಂಬೀ ಶಬ್ದ ಅರ್ಥ ಬಹುಳ, ಅರ್ಥ ಘನ ಆಗಿದೆ. ಹಿಂದಿನ ಕಾಲದಲ್ಲಿ ಒಬ್ಬನಿಗಿಂತ ಒಬ್ಬ ಉಚ್ಚಕೋಟಿಯ ನೇತಾರ ಆಗಿ ಹೋದ. ಆದರೆ ಈಗ

ನೇತೃತ್ವದ ದಿವಸಗಳು ಸಮಾಪ್ತವಾಗಿದೆ. ಇದರರ್ಥ ಭವಿಷ್ಯದಲ್ಲಿ ಮಹಾಪುರುಷರಾಗುವುದಿಲ್ಲ ಎಂದಲ್ಲ. ಆದರೆ ಇದುವರೆಗೆ ಆಗಿ ಹೋದ ಮಹಾಪುರುಷರಿಗಿಂತಲೂ ಹೆಚ್ಚಿನ ಮಾಹಾನ್ ಪುರುಷರು ಭವಿಷ್ಯದಲ್ಲಿ ಆಗುವರೆಂದು ನಾನು ನಂಬುತ್ತೇನೆ. ಆಗಲೂ ಬೇಕು, ಮಾನವನ ವಿಕಾಸವಾಗುವುದಿದ್ದರೆ, ಭವಿಷ್ಯದಲ್ಲಿ ಬರುವ ಮಹಾನ್ ಪುರುಷರು ನೇತೃತ್ವದ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳದೇ ಇರುವಷ್ಟು ಮಹಾನ್‌ರಾಗಿರುವರು. ಅವರು ಅನೇಕರಲ್ಲಿ ಒಬ್ಬರಾಗಿರುವರು. ಅವರು ಸಮೂಹದಲ್ಲಿ ಸಮ್ಮಿಲಿತರಾಗಿರುವರು. ಇದೇ ಅವರ ವಿಶೇಷತೆಯಾಗುವುದು.

ವರ್ಡ್ಸ್‌ವರ್ಥ್‌ನ ಒಂದು ಕವಿತೆ ಇದೆ. ತನ್ನ ಸ್ಮಾರಕ ಯಾವ ರೀತಿ ಇರಬೇಕೆಂಬುದನ್ನು ಆ ಕವಿತೆಯಲ್ಲಿ ಅವನು ವ್ಯಕ್ತಮಾಡಿದ್ದಾನೆ. ನಾನು ದಿನಾಲು ಒಂದು ಬೆಟ್ಟದ ಮೇಲೆ ತಿರುಗಾಡಲು ಹೋಗುತ್ತೇನೆ. ಅಲ್ಲಿ ಅನೇಕ ಕಲ್ಲುಗಳು ಬಿದ್ದಿದ್ದವು ಅವುಗಳಲ್ಲಿ ತುಂಬಾ ಅತ್ಯುತ್ತಮವಾಗಿರುವ ಕಲ್ಲನ್ನು ಹುಡುಕಿಕೊಂಡು ಜನರು ತೆಗೆದುಕೊಂಡು ಹೋದರು ಮತ್ತು ಅವುಗಳಲ್ಲಿ ಕಲೆ ಸೃಷ್ಟಿಸಿದರು. ಕಲೆಗೆ ಯೋಗ್ಯವಾಗದೇ ಇರುವಂಥ ಇಂದು ಕಲ್ಲನ್ನು ನಾನು ನೋಡಿದೆ. ಅದರ ಕಡೆಗೆ ಯಾರ ಗಮನವೂ ಹೋಗಲಿಲ್ಲ. ಆ ಕಲ್ಲನ್ನು ನನ್ನ ಸ್ಮಾರಕಕ್ಕಾಗಿ ಆಯ್ಕೆಮಾಡಿಕೊಳ್ಳಿ ಮತ್ತು ಅದರ ಮೇಲೆ 'ಒನ್ ಆಫ್ ದಿ ಮೆನಿ' – ಅನೇಕರಲ್ಲಿ ಒಬ್ಬ. ಇದು ವರ್ಡ್ಸ್ ವರ್ತನ ಆಕಾಂಕ್ಷೆಯಾಗಿತ್ತು. ಆತನೇನೂ ಸಣ್ಣ ಮನುಷ್ಯನಾಗಿದ್ದಿಲ್ಲ. ಆದರೆ ತನ್ನ ಸ್ಮಾರಕದ ಮೇಲೆ ತನ್ನ ಹೆಸರು ಇರಬೇಕೆಂಬುದನ್ನು ಅವನು ಒಪ್ಪಲಿಲ್ಲ. ಅನೇಕರಲ್ಲಿ ಒಬ್ಬನಾಗಿರಲು ಇಷ್ಟಪಟ್ಟ.

ಭಗವಾನ್ ಕೃಷ್ಣ ಕೂಡ ಇದೇ ರೀತಿ ಅನೇಕರಲ್ಲಿ ಒಬ್ಬನಾಗಿದ್ದನು. ದನಕಾಯುವ ಹುಡುಗರು ಅವನನ್ನು ತಮ್ಮಲ್ಲಿಯೇ ಒಬ್ಬನೆಂದು ತಿಳಿದಿದ್ದರು. ಇಷ್ಟು ದೊಡ್ಡ ಭಗವಂತನನ್ನು ಅರ್ಜುನನು ತನ್ನ ಕುದುರೆಗಳ ಚಾಲಕನನ್ನಾಗಿ ಮಾಡಿದ ಮತ್ತು ಅವನಿಂದ ಕುದುರೆಗಳ ಸೇವೆ ಮಾಡಿಸಿದ. ಇದಕ್ಕೆ ಕಾರಣವೇನೆಂದರೆ ಭಗವಾನ್ ಕೃಷ್ಣ ಅನೇಕರಲ್ಲಿ ಒಬ್ಬನಾಗಿದ್ದ, ನಮ್ಮಲ್ಲಿಯೇ ಒಬ್ಬನಾಗಿದ್ದ.

ನಾನೊಂದು ಕವಿತೆ ಬರೆದಿದ್ದೆ ಅದರರ್ಥ ಹೀಗಿದೆ: ಪ್ರಭು! ನನಗೆ ಬೆಳದಿಂಗಳಿನ ಮೆರವಣಿಗೆ ಬೇಕಿಲ್ಲ. ಬದಲಿಗೆ ಅಮಾವಾಸೆ ರಾತ್ರಿಯ ಸ್ವಾತಂತ್ರ್ಯತೆ ಬೇಕು. ಆಗ ಆಕಾಶದಲ್ಲಿ ಒಂದಕ್ಕಿಂತ ಒಂದು ಹೆಚ್ಚಿನ ಪ್ರಕಾಶಮಾನವಾದ ತಾರೆಗಳು ಇರುತ್ತವೆ. ಯಾವ ತಾರೆಗಳು ಚಿಕ್ಕದಾಗಿ ಕಾಣುತ್ತವೊ ಅವು ದೊಡ್ಡದಾಗಿ ಕಾಣುವ ತಾರೆಗಳಿಗಿಂತಲೂ ದೊಡ್ಡದಾಗಿರುತ್ತವೆ! ಎಲ್ಲವು ಆಕಾಶವನ್ನು ಅಲಂಕೃತಗೊಳಿಸುತ್ತವೆ ಮತ್ತು ಪ್ರತಿಯೊಂದಕ್ಕು ತನ್ನದೇ ಆದ ಸ್ವಾತಂತ್ರ್ಯವಿರುತ್ತದೆ. ಯಾಕೆಂದರೆ ಅಲ್ಲಿ ಚಂದ್ರನ ಬಲಾತ್ಕಾರದ ಆಕ್ರಮಣಕಾರಿ ಪ್ರಕಾಶವಿರುವುದಿಲ್ಲ!

ವೇದಗಳಲ್ಲಿ ಭಗವಂತನ ವರ್ಣನೆ ಇದೆ – ಗಣನಾಮ್‌ತ್ವ ಗಣಪತಿಮ್ ಅವಾಮಹೆ

– ಹೇ ಭಗವಂತ! ನೀನು ಗಣಪತಿ. ನಮ್ಮ ಈ ಗಣವಿದೆ. ಅಂದರೆ ನಮ್ಮ ಗಣದಲ್ಲಿ ಯಾರೂ ಗಣ–ಪತಿ ಇಲ್ಲ. ಭಗವಂತನೇ ಗಣಪತಿ. ಗಾಯತ್ರೀ ಮಂತ್ರದಲ್ಲಿ ಭಗವಂತನ ಪ್ರಾರ್ಥನೆ ಮಾಡಲಾಗಿದೆ. ಅದರಲ್ಲಿ "ನನ್ನ ಬುದ್ಧಿಗೆ ಪ್ರೇರಣೆ ಕೊಡು" ಎಂದು ಹೇಳಿಲ್ಲ, "ನಮ್ಮ ಬುದ್ಧಿಗೆ ಪ್ರೇರಣೆ ಕೊಡು" ಎಂದು ಹೇಳಲಾಗಿದೆ. ಆ ಕಾಲದಲ್ಲಿ ಈ ವಿಚಾರವಿತ್ತು. ನಂತರ ಬುದ್ಧ ಮತ್ತು ಮಹಾವೀರರು ಕೂಡ ಗಣಸೇವಕತ್ವವನ್ನು ಸ್ಥಾಪಿಸಿದರು. ತದನಂತರ ಶೈವರು ಮತ್ತು ವೈಷ್ಣವರು ಇಡೀ ಭಾರತದಲ್ಲಿ ಮಾಡಿದಂಥ ಕೆಲಸ ನೇತೃತ್ವದ ಆಧಾರದಿಂದಲ್ಲ ಗಣಸೇವಕತ್ವದ ಆಧಾರದ ಮೇಲೆ ಮಾಡಿದರು. ಉತ್ತರದಿಂದ ದಕ್ಷಿಣದವರೆಗೆ ಅಮರನಾಥದಿಂದ ಕನ್ಯಾಕುಮಾರಿಯವರೆಗೆ ಭಾರತ ಒಂದಾಯಿತು. ಅದಾದದ್ದು ಗಣಸೇವಕತ್ವದ ಆಧಾರದಿಂದ.

ಉಪನಿಷತ್ತುಗಳ ಕಾಲದಲ್ಲಿ ಆಗಿದ್ದಂಥ ಕೆಲಸವೆಲ್ಲ ತಂತ್ರಮುಕ್ತವಾಗಿತ್ತು. ಆಟೋಮೇಶನ್ (ಸ್ವಯಂ ಸಂಚಲಿತ) ವಾಗಿತ್ತು. ಅದರ ಪ್ರಭಾವ ಇಂದೂ ಕೂಡ ಇದೆ. ಬಿಹಾರನಲ್ಲಿ ಸುಲ್ತಾನ್‌ಗಂಜದಿಂದ ಗಂಗೆಯ ನೀರು ದೇವಘರ್‌ಗೆ ತೆಗೆದುಕೊಂಡು ಹೋಗುತ್ತಾರೆ. ನೂರೈವತ್ತು ಮೈಲಿನ ಅಂತರವಿದೆ. ಹೆಗಲ ಮೇಲೆ ನೀರು ಹೊತ್ತುಕೊಂಡು ಹೋಗುವ ನಿಯಮವಿದೆ. ನೀರು ತುಂಬಿದ ಬಿಂದಿಗೆಯನ್ನು ಎಂದೂ ಭೂಮಿಯ ಮೇಲೆ ಇಡಲಾಗುವುದಿಲ್ಲ. ಒಬ್ಬ ಮನುಷ್ಯ ದಣಿದರೆ ಇನ್ನೊಬ್ಬ ಮನುಷ್ಯ ಅವನ್ನು ಹೆಗಲ ಮೇಲೆ ಇರಿಸಿಕೊಳ್ಳುತ್ತಾನೆ. ಯಾವ ಸಂಘಟನೆಯೂ ಇಲ್ಲ, ಯಾವ ತಂತ್ರವೂ ಇಲ್ಲ. ಸಾವಿರಾರು ವರ್ಷಗಳಿಂದ ಇದು ನಡೆಯುತ್ತಾ ಬಂದಿದೆ.!!

ಜಗತ್ತಿನ ಮೇಲೆ ಮತ್ತು ನಮ್ಮ ದೇಶದ ಮೇಲೆ ದೇವರದು ಬಹಳ ಕೃಪೆಯಿದೆ. ಅವನು ನಿರಂತರವಾಗಿ ಸಮಾಜಕ್ಕೆ ಮಾರ್ಗದರ್ಶನ ಮಾಡುವಂಥ ಮಹಾಪುರುಷರನ್ನು ಕಳಿಸಿದ್ದಾನೆ. ಆದರೆ ದೇವರು ಇನ್ನು ಮುಂದೆ ವಿಚಾರ ಕಳುಹಿಸುವುದಾಗಿ ತೀರ್ಮಾನಿಸಿದ್ದಾನೆ. ವಿಚಾರ ಪ್ರತಿಯೊಬ್ಬ ಮನುಷ್ಯನಿಗೆ ತಲುಪುವುದು. ಎಲ್ಲ ಜನರು ಸೇರಿ ಆ ಬಗ್ಗೆ ಯೋಚನೆ ಮಾಡುವರು ಹಾಗೂ ಒಟ್ಟಿಗೆ ಸೇರಿ ಮುಂದೆ ನಡೆಯುವರು. ಒಬ್ಬ ದೊಡ್ಡ ವ್ಯಕ್ತಿ ಎಲ್ಲರಿಗೂ ಮಾರ್ಗದರ್ಶನ ಮಾಡುವ, ಎಲ್ಲ ಜನರು ಅವನ ಹಿಂದೆ ಹೋಗುವುದು ಹಳೆಯ ಕಾಲದ ಮಾತಾಯಿತು.

ವಿಜ್ಞಾನ ಯುಗದಲ್ಲಿ ನಾಯಕರ ಯಾವ ಅಗತ್ಯವೂ ಇರುವುದಿಲ್ಲ. ಮಾನವರು ಸಂಘ ರೂಪದಲ್ಲಿಯೇ ಕೆಲಸ ಮಾಡುವರು. ಇದು ಹೊಸ ಯುಗದ ಕರೆ. ಹೊಸ ಯುಗದ ಚಿಹ್ನೆ. ಈಗ ಹೊಸ ಯುಗ ಬರುತ್ತಿದೆ. ಹೀಗಿರುವಾಗ ನೀವು ಹೊಸ ಯುಗದ ಸಿದ್ಧತೆ ಮಾಡಿಕೊಳ್ಳುವಿರೊ ಅಥವಾ "ನಮಗೆ ನಾಯಕರ ಅಗತ್ಯವಿದೆ; ನಾಯಕರಿಲ್ಲದೆ ನಮಗೆ ಪ್ರೇರಣೆ ಮತ್ತು ಉತ್ಸಾಹ ದೊರೆಯುವುದಿಲ್ಲ" ಎಂಬ ಹಳೆಯ ಭಾಷೆಯನ್ನೇ ಆಡುವಿರೊ.! ಈ ಯುಗ ಯಾವುದೇ ವ್ಯಕ್ತಿ ವಿಶೇಷದ

ಯುಗವಲ್ಲ. ಇಂದು ಸಂಘದ ಯುಗವೇ ಬರುತ್ತಿದೆ.

ನಾನು ಸರ್ವೋದಯ ಸಮ್ಮೇಳನಗಳಿಗೆ ಬರುವುದನ್ನು ನಿಲ್ಲಿಸಿದ್ದೇನೆ. ಅದಕ್ಕೆ ಕಾರಣ ಏನೆಂದರೆ ನಾನು ನಾಯಕನಲ್ಲ ಮತ್ತು ಎರಡನೇ ಕಾರಣ ನೇತೃತ್ವದ ನಿರಸನ ಮಾಡುವುದು ನನ್ನ ಕೆಲಸವಾಗಿದೆ.

ಇಂದು ಪ್ರತಿ ಆಂದೋಲನದಲ್ಲಿ ನಾಯಕರ ಅವಶ್ಯಕತೆ ಇರುತ್ತದೆ. ಆದರೆ ಅಹಿಂಸಕ ಆಂದೋಲನ ನಾಯಕರ ಮೇಲೆ ನಿರ್ಭರವಾಗಿರಲು ಸಾಧ್ಯವಿಲ್ಲ, ನಿರ್ಭರವಾಗಿರಬಾರದು ಕೂಡ. ಸಂಸ್ಥೆಗಳ ಮೇಲು ಕೂಡ ನಿರ್ಭರವಾಗಿರಬಾರದು. ವಿಚಾರವೇ ಸಂಸ್ಥೆ ಮತ್ತು ವ್ಯಕ್ತಿಯೇ ನೇತಾ. ಇದು ಅಹಿಂಸೆಯ ಪ್ರಕ್ರಿಯೆ. ವಿಜ್ಞಾನ ಯುಗದಲ್ಲಿ ಇತ್ತ ವಿಶ್ವವಿರುವುದು ಮತ್ತು ಅತ್ತ ವ್ಯಕ್ತಿ ಇರುವನು. ಮಧ್ಯದ ಎಲ್ಲ ಕೊಂಡಿಗಳು ಸಡಿಲಾಗುವುದು.

ಇದರ ಅರ್ಥ ಜನರೆಲ್ಲರು ವಿಶೃಂಖಲರಾಗಿರುವರೆಂದು ಅಲ್ಲ. ಪರಸ್ಪರ ಅನುರಾಗದ ಸೂತ್ರವು ಎಲ್ಲರಲ್ಲಿ ಇರಲೇಬೇಕು. ಅನುರಾಗಕ್ಕಿಂತಲು ಹೆಚ್ಚಿನದಾದ ಇನ್ನು ಯಾವ ಶಕ್ತಿಯಾಗಲಿ, ಸಂಘಟನೆಯಾಗಲಿ ಇರಲು ಸಾಧ್ಯವಿಲ್ಲ. ನಮ್ಮದು ಆಧ್ಯಾತ್ಮಿಕ ಬಂಧು ಮಂಡಲವಾಗಬೇಕು. ಸಾರಂಶವಿಷ್ಟೇ, ವಿಚಾರದ ನೇತೃತ್ವದಲ್ಲಿ ಪರಸ್ಪರ ಅನುರಾಗದಿಂದ ಕೂಡಿದ ಕಾರ್ಯಕರ್ತ ಮುಕ್ತಭಾವದಿಂದ ಸತತವಾಗಿ ಕೆಲಸ ಮಾಡುತ್ತಾ ಹೋದರೆ ಅದರಲ್ಲಿ ಅಹಿಂಸಕ ಕ್ರಾಂತಿಯ ದರ್ಶನವಾಗುವುದು ಸಾಧ್ಯವಾಗುತ್ತದೆ.

ಈ ರೀತಿ ಅಹಿಂಸಕ ಕ್ರಾಂತಿಯ ಕೆಲಸವಾಗಬಲ್ಲದು. ಯಾವುದೇ ಒಬ್ಬ ವ್ಯಕ್ತಿಯ ಪ್ರಭಾವ ಎಲ್ಲರ ಮೇಲೆ ಉಂಟಾಗುವುದರ ಬದಲು ಸಂಘ ಶಕ್ತಿ ಬೆಳೆಯಲಿ, ಜನರ ಶಕ್ತಿ ಬೆಳೆಯಲಿ. ಅಹಿಂಸಕ ಕ್ರಾಂತಿ ವ್ಯಕ್ತಿನಿಷ್ಠವಾಗಿರಬಾರದು. ಈಗ ವ್ಯಕ್ತಿ ಪೂಜೆಯ ಯುಗವಿಲ್ಲ. ಅದರಿಂದಾಗಿ ವ್ಯಕ್ತಿತ್ವದ ವಿಕಾಸ ನಿಲ್ಲುತ್ತದೆ. ನಾವು ವ್ಯಕ್ತಿಗಿಂತಲು ಮೇಲೇರಬೇಕಿದೆ. ಗಣಸೇವಕತ್ವವನ್ನು ಪ್ರಕಟಿಸಬೇಕಿದೆ.

ಸಾಮಾನ್ಯತಃ ನಾಯಕರಿಂದ ಎರಡು ಸಂಗತಿಗಳು ದೊರೆಯುತ್ತವೆ. ಒಂದು, ವಿಶೇಷ ಪ್ರಕಾರದ ಮಾರ್ಗದರ್ಶನ ಮತ್ತು ಎರಡನೆಯದು, ಶಿಸ್ತುಬದ್ಧ ಜೀವನ. ಈ ಎರಡು ಸಂಗತಿಗಳಿಲ್ಲದೆ ಯಾವುದೇ ಸಮಾಜದ ವ್ಯವಹಾರ ನಡೆಯುವುದಿಲ್ಲ. ಆದರೆ ಮುಂದಿನ ಯುಗದಲ್ಲಿ ಉತ್ತರೋತ್ತರವಾಗಿ ಈ ಎರಡು ಸಂಗತಿಗಳಿಗಾಗಿ ನಾಯಕರಿಗೆ ಕಷ್ಟಕೊಡುವ ಅಗತ್ಯವಿರುವುದಿಲ್ಲ. ಇದನ್ನು ಅರ್ಥ ಮಾಡಿಕೊಳ್ಳಲು ನಾವು ವಿಜ್ಞಾನ ಯುಗದ ಸ್ವರೂಪವನ್ನು ತಿಳಿಯಬೇಕಾಗುವುದು. ವಿಜ್ಞಾನ ಯುಗ ತನ್ನೊಂದಿಗೆ ಏನೆಲ್ಲವನ್ನು ತರುತ್ತದೆಂಬುದರ ಬಗ್ಗೆ ಜನರಿಗೆ ಗಮನವೇ ಇಲ್ಲ.

ವಿಜ್ಞಾನ ಯುಗದಲ್ಲಿ ಮಾನವನಿಗೆ ಅನ್ನದ ಹಸಿವೆಗಿಂತ ಜ್ಞಾನದ ಹಸಿವು ಅಧಿಕವಾಗಿರುವುದು. ಅಂದರೆ ಈ ಯುಗದಲ್ಲಿ ಜನರು ಹಸಿವಿನಿಂದರಲು ಒಪ್ಪುತ್ತಾರೆಯೇ

ವಿನಃ ಜ್ಞಾನಹೀನ ಸ್ಥಿತಿಯಲ್ಲಿ ಇರುವುದನ್ನು ಒಪ್ಪುವುದಿಲ್ಲ. ನ ಹಿ ಜ್ಞಾನೇನ ಸದೃಶಂ ಪವಿತ್ರಾಮಿಯ ವಿದ್ಯತೆ "ಜಗತ್ತಿನಲ್ಲಿ ಜ್ಞಾನದಂಥ ಪವಿತ್ರ ವಸ್ತು ಬೇರೊಂದಿಲ್ಲ." ಅದು ಆತ್ಮಜ್ಞಾನ ಮತ್ತು ವಿಜ್ಞಾನಗಳೆರಡಕ್ಕೂ ಅನ್ವಯಿಸುತ್ತದೆ. ಆತ್ಮಜ್ಞಾನ ಮನುಷ್ಯನನ್ನು ಅಂತರಂಗದಲ್ಲಿ ಪವಿತ್ರ ಮಾಡಿದರೆ ಅದೇ ವಿಜ್ಞಾನ ಅವನನ್ನು ಬಹಿರಂಗದಲ್ಲಿ ಪವಿತ್ರ ಮಾಡುತ್ತದೆ. ಎರಡು ಸೇರಿ ಮನುಷ್ಯನನ್ನು ಪರಿಪೂರ್ಣವಾಗಿ ಪವಿತ್ರಮಾಡುತ್ತದೆ. ವರ್ತಮಾನ ಕಾಲದಲ್ಲಿ ನಾಯಕರು ತಮ್ಮ ಅನುಯಾಯಿಗಳಿಗೆ ಏನೆಲ್ಲವನ್ನೂ ಕೊಡುತ್ತಾರೊ ಅದು ಅವರಿಗೆ ಈ ಜ್ಞಾನ-ವಿಜ್ಞಾನದಿಂದಲೇ ಪ್ರಾಪ್ತವಾಗುವುದು. ಅಂದರೆ ಈಗ ಈ ಜಗತ್ತಿನಲ್ಲಿ ಜನರು ಒಟ್ಟಿಗೆ ಇದ್ದು ಸಮೂಹದ ರೂಪದಲ್ಲಿ ಕೆಲಸ ಮಾಡುತ್ತಿರುವರು. ಅಂದರೆ ಒಬ್ಬ ಮನುಷ್ಯನಲ್ಲಿ ಯಾವ ಗುಣಗಳ ಕೊರತೆ ಇರುತ್ತದೊ ಅದನ್ನು ಬೇರೆಯವರು ತುಂಬಿಕೊಡುವರು.

ಇಂಥ ಒಬ್ಬನ ನಾಯಕತ್ವ ಎಂಬುದರ ಅರ್ಥವೇನು? ಭಗವಂತನ ಯೋಜನೆಯಲ್ಲಿ ಒಬ್ಬ ಮನುಷ್ಯನಲ್ಲಿ ಒಂದು ಗುಣವಿದ್ದರೆ ಇನ್ನೊಬ್ಬರಲ್ಲಿ ಎರಡನೆಯ ಗುಣವಿರುತ್ತದೆ. ಪ್ರತಿಯೊಬ್ಬನಲ್ಲಿ ಎಲ್ಲ ಗುಣಗಳಿರುವುದಿಲ್ಲ. ಅಲ್ಲದೆ ಯಾರು ಸರ್ವಥಾ ಗುಣಹೀನ ಕೂಡ ಆಗಿರುವುದಿಲ್ಲ. ಆದರೆ ಜ್ಞಾನ, ಸತ್ಯನಿಷ್ಠೆ, ಉದ್ಯೋಗಶೀಲತೆ, ವ್ಯಾಪಕಬುದ್ಧಿ ಇತ್ಯಾದಿ ಐದತ್ತು ಗುಣಗಳು ಒಟ್ಟಿಗೆ ಇರುತ್ತವೆ. ಆತನೆ ಬೇರೆಯವರ ನೇತೃತ್ವ ಮಾಡುತ್ತಾನೆ. ನೇತಾ ಅಂದರೆ ಅನೇಕ ಗುಣಗಳ ಸಮುಚ್ಚಯ. ಆದರೆ ಹೊಸ ಯುಗದಲ್ಲಿ ಜನರು ಜ್ಞಾನ ವಿಜ್ಞಾನದ ಕಾರಣದಿಂದಾಗಿ ಒಬ್ಬಂಟಿಗರಾಗಿ ಇರುವುದನ್ನು ಇಷ್ಟಪಡುವುದಿಲ್ಲ. ಇಪ್ಪತ್ತು ಮೂವತ್ತು ಜನರ ಸಮೂಹ ಮಾಡಿಕೊಂಡೆ ಇರುವರು. ಹೀಗೆ ಅನೇಕ ಗುಣಗಳ ಸಮುಚ್ಚಯವೇ ಆ ಸಮಯದಲ್ಲಿ ನೇತೃತ್ವದ ಕೆಲಸ ಮಾಡುವುದು.

ಈ ರೀತಿ ಗಣಸೇವಕತ್ವದಲ್ಲಿ ಲೀಡರ್‌ಶಿಪ್ ಇಲ್ಲ. ನಾವೆಲ್ಲರು ಸಹವಿಚಾರಕರು. ನಿಮ್ಮ ಮತ್ತು ನನ್ನ ವಿಚಾರ ಒಂದೇ ಆಗಿರಬೇಕೆಂಬ ಅಗತ್ಯವಿಲ್ಲ. ನಾವು ಕುಳಿತು ವಿಚಾರಮಾಡುತ್ತೇವೆ, ನಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತೇವೆ ನಂತರ ಎಲ್ಲರ "ಕಾನ್ಸಸ್" ನೋಡಿ ಅದಕ್ಕನುಕೂಲರಾಗುತ್ತೇವೆ. ಮುಂದೆ ಕೆಲಸದಲ್ಲಿ ಪೂರ ಸಹಯೋಗ ಕೊಡುತ್ತೇವೆ. ಪ್ರಾರಂಭದಲ್ಲಿ ನಮ್ಮ ನಮ್ಮ ಭಿನ್ನ ಮತವನ್ನು ಬಹಿರಂಗಪಡಿಸಿಯಾಯಿತು. ಇನ್ನು ಕೆಲಸದಲ್ಲಿ ಯಾರೂ ವಿರೋಧ ಮಾಡುವುದಿಲ್ಲ. ಇದು ಗಣ ಸೇವಕತ್ವ, ಇದಕ್ಕೆ ಉತ್ತಮ ಉದಾಹರಣೆ ನಮ್ಮ ಶರೀರ. ಅದರಲ್ಲಿ ಅನ್ಯೋನ್ಯ ಸಹಯೋಗವಿರುತ್ತದೆ. ಒಂದು ಇನ್ನೊಂದಕ್ಕಾಗಿ ತ್ಯಾಗಮಾಡುವ ಭಾವನೆ ಇರುತ್ತದೆ. ತಲೆಯ ಮೇಲೆ ಏಟು ಬೀಳುತ್ತಿದ್ದಂತೆ ಕೈ ತಂತಾನೆ ರಕ್ಷಿಸುವುದಕ್ಕಾಗಿ ಮುಂದಕ್ಕೆ ಬರುತ್ತದೆ. ಶರೀರಕ್ಕೆ ನನಗಿಂತಲು ತಲೆಯ ಅವಶ್ಯಕತೆ ಹೆಚ್ಚಿದೆ ಎಂದು ಕೈಗೆ ಗೊತ್ತಿದೆ. ಒಂದು ವೇಳೆ ಇದನ್ನರಿಯದಿದ್ದರೆ

ವಿವೇಕವೇ ಇಲ್ಲ ಎಂದು ಹೇಳಲಾಗುವುದು. ಗಣಸೇವಕತ್ವದಲ್ಲಿ ಕೂಡ ತಮ್ಮ ತಮ್ಮ ಶಕ್ತಿ ಏನಿದೆಯೆಂಬ ತಿಳುವಳಿಕೆ ಎಲ್ಲರಿಗೆ ಇದೆ. ಅಹಂಕಾರವಿಲ್ಲ, ನನ್ನ ಸ್ಥಾನ ಏನು ಎಂಬುದು ಗೊತ್ತಿದೆ, ಅಂದರೆ ನಮ್ರತೆ ಇದೆ. ಪ್ರತಿಯೊಬ್ಬರಿಗೂ ನನ್ನ ಉಪಯೋಗ ಯಾವ ರೀತಿಯಲ್ಲಿ ಎಂಬುದು ಗೊತ್ತಿದೆ. ಇದು ಗಣಸೇವಕತ್ವದ ಲಕ್ಷಣ. ನಮ್ಮ ನಮ್ಮಲ್ಲಿ ಪ್ರೇಮವಿರಲಿ. ಮಿತ್ರರ ರೀತಿಯಲ್ಲಿ ಕೆಲಸ ಮಾಡೋಣ. ಪ್ರತಿಯೊಬ್ಬರ ಬಳಿ ಸತ್ಯವಿದೆ. ಆ ಸತ್ಯದ ಅಂಶವನ್ನು ಗ್ರಹಿಸೋಣವಾಗಲಿ. ಪ್ರತಿಯೊಬ್ಬರಲ್ಲಿ ಯಾವ ಗುಣವಿದೆಯೊ ಅದನ್ನೂ ಗ್ರಹಿಸುವುದಾಗಲಿ ನಾವೆಲ್ಲರು ಸೇವಕರು ಮತ್ತು ನಾವೆಲ್ಲರು ಗುಣ ಮತ್ತು ದೋಷಗಳಿಂದ ತುಂಬಿದವರಾಗಿದ್ದೇವೆ. ಆದರೆ ನಾವೆಲ್ಲರು ಒಂದು ಸ್ನೇಹ ಸೂತ್ರದಿಂದ ಕಟ್ಟಲ್ಪಟ್ಟಿದ್ದೇವೆ. ತಲೆ ಅನೇಕವಿರಲಿ, ಪರ್ವಾಗಿಲ್ಲ. ಆದರೆ ಮನಸ್ಸು ಒಂದಾಗಿರಬೇಕು. ಇದು ಗಣಸೇವಕತ್ವಕ್ಕಾಗಿ ಅವಶ್ಯಕ.

ಭೂದಾನ ಆಂದೋಲನದ್ದು ಒಂದು ದೊಡ್ಡ ವಿಶೇಷತೆ ಇದೆ. ಇದರಲ್ಲಿ ಅಖಿಲ ಭಾರತೀಯ ನೇತೃತ್ವ ಉಂಟಾಗುವುದಿಲ್ಲ. ಯಾಕೆಂದರೆ ಭೂದಾನ ಆಂದೋಲನ ಪಾದಯಾತ್ರೆಯ ಮೂಲಕ ನಡೆಯುತ್ತದೆ. ಭಗವಾನ್ ಬುದ್ಧ ಕೂಡ ಅಖಿಲ ಭಾರತೀಯ ನೇತಾ ಆಗಲು ಸಾಧ್ಯವಾಗಲಿಲ್ಲ. ಅವರು ಪ್ರಯಾಗದಿಂದ ಹಿಡಿದು ಗಯಾವರೆಗೆ ತಿರುಗಾಡುತ್ತಿದ್ದರು ಮತ್ತು ಕೇವಲ ಪಾಳಿ ಭಾಷೆಯಲ್ಲಿ ಮಾತನಾಡುತ್ತಿದ್ದರು. ಆದರೂ ಕೂಡ ಅವರ ವಿಚಾರ ವಿಶ್ವವ್ಯಾಪಕವಾಗುವಂತೆ ಯೋಗ್ಯವಾಗಿತ್ತು. ಅಲ್ಲದೆ ಅವರ ಜೀವನ ಕೂಡ ಅವರ ವಿಚಾರಕ್ಕನುಗುಣವಾಗಿತ್ತು. ಆದ್ದರಿಂದಲೇ ಅದು ವಿಶ್ವದ ತುಂಬೆಲ್ಲಾ ಪಸರಿಸಿತು. ಜನಕ್ರಾಂತಿಯ ಕೆಲಸ ಒಂದು ಕಡೆ ಉಂಟಾಗುತ್ತದೆ ಮತ್ತು ಗಾಳಿಯ ಮೂಲಕ ಜಗತ್ತಿನೆಲ್ಲೆಡೆಗೆ ಹೋಗುತ್ತದೆ. ನಾನು ಕೂಡ ಪಾದಯಾತ್ರೆ ಮಾಡುತ್ತೇನೆ. ಆದ್ದರಿಂದ ನೇತೃತ್ವ ಪ್ರತಿಯೊಂದು ಸ್ಥಳದಲ್ಲಿ ಸ್ಥಾನಿಕವಾಗಿಯೇ ಇರುತ್ತದೆ. ಬದಲಿಗೆ ಸ್ಥಾನಿಕ ನೇತೃತ್ವ ಅಲ್ಲ, ಸ್ಥಾನಿಕ ಸೇವಕತ್ವ ಎಂದು ಹೇಳಬೇಕು. ಏಕೆಂದರೆ ಸೇವಕರಾಗಿ ಜನರ ಬಳಿ ಹೋದಾಗಲೇ ಭೂದಾನ ದೊರೆಯುವುದು. ನಾವು ನಮ್ಮ ಸ್ವಾಮಿಯ ಸೇವಕರಾಗಿದ್ದೇವೆ ಎಂಬುದರಲ್ಲಿಯೇ ನಮ್ಮ ವಿಶೇಷತೆ ಇದೆ. ಲೋಕ ಹೃದಯದಲ್ಲಿ ವಿರಾಜಮಾನರಾಗಿರುವ ಪ್ರಭುವನ್ನು ಜಾಗೃತಗೊಳಿಸಲು ನಾವು ಭಕ್ತರಾಗಿ ಹೋಗೋಣ ಆಗಲೆ ಪ್ರಭು ಎಚ್ಚರಗೊಳ್ಳುತ್ತಾನೆ. ತುಳಸಿದಾಸ್ ಹಾಡುತ್ತಿದ್ದರು, ಎಚ್ಚರಗೊಳ್ಳಿ ರಘುನಾಥ ಕುಮಾರ.

ರಷಿಯಾದಲ್ಲಿ "ಕಲೆಕ್ಟೀವ್ ಲೀಡರ್‌ಶಿಪ್" ನಡೆಯುವುದು ಎಂಬ ಹೊಸ ಶೋಧ ಆಗಿದೆ. ಅಂದರೆ ವ್ಯಕ್ತಿವಿಶೇಷದ ನೇತೃತ್ವವಿಲ್ಲ – ಗಣನೇತೃತ್ವ ನಡೆಯುವುದು. ಈ ರೀತಿ ಭೂದಾನ ಯಜ್ಞದಲ್ಲಿ ಕೂಡ ಗಣಸೇವಕತ್ವದ ಶೋಧನೆ ಆಗಿದೆ.

ಮಧ್ಯ ಪ್ರದೇಶದಲ್ಲಿ ಒಂದು ವ್ಯಾಪಕ ಪ್ರಯೋಗ ಪ್ರಾರಂಭವಾಗಿದೆ. ಕಾರ್ಯಕರ್ತರು

ಒಟ್ಟಿಗೆ ಸೇರಿ ಜನರ ಬಳಿ ಹೋಗುತ್ತಾರೆ. ಹೊಸ ಜನರಿಗೆ ಅವಕಾಶ ಕೊಡಬೇಕೆಂಬ ಉದ್ದೇಶಕ್ಕಾಗಿ ಅದರಲ್ಲಿ ಹಳೆಯ ನಾಯಕರು ಭಾಗಿಯಾಗಿಲ್ಲ! ಅಂದರೆ ಆಗಲೇ ಸಿದ್ಧವಾಗಿರುವ ಮುಖಂಡರು ಉಪಯೋಗಕ್ಕೆ ಬರುವುದಿಲ್ಲ ಮತ್ತು ಹೊಸ ನಾಯಕರು ಒಮ್ಮೆಲೆ ಉಂಟಾಗುವುದಿಲ್ಲ! ಆದ್ದರಿಂದ ಚಿಕ್ಕ ಚಿಕ್ಕ ಕಾರ್ಯಕರ್ತರು ಒಟ್ಟಿಗೆ ಸೇರಿ ಸಾಮೂಹಿಕವಾಗಿ ಕೆಲಸಮಾಡಲು ಪ್ರಾರಂಭಿಸಿದರು. ಈ ಗಣಸೇವಕತ್ವ ತುಂಬಾ ಯಶಸ್ವಿಯಾಯಿತೆಂಬ ಸಂಗತಿ ಅನುಭವಕ್ಕೆ ಬಂತು. ಕಾರ್ಯಕರ್ತರ ಆತ್ಮವಿಶ್ವಾಸ ಬಹಳ ಹೆಚ್ಚಿದುದನ್ನು ನಾನು ನೋಡಿದೆ.

ಸರ್ವೋದಯ – ಸಮಾಜದ ಪ್ರತಿಯೋರ್ವ ಸೇವಕ ಸರ್ವತಂತ್ರ – ಸ್ವತಂತ್ರನಿದ್ದಾನೆ. ಅವನಿಗೆ ಯಾವುದೇ ಪ್ರಕಾರದ ಬಂಧನವಿಲ್ಲ. ಅವನು ಒರ್ವ "ಸರ್ವಾಧಿಕಾರಿ ಸೇವಕ". ಸರ್ವಾಧಿಕಾರ ಮತ್ತು ಸೇವಕತ್ವ ಎರಡರ ಸಂಗಮವಾಗಿರುವಲ್ಲಿ ಸಹಜವಾಗಿಯೇ ದೋಷಗಳ ನಿರಸನ ಮತ್ತು ಎಲ್ಲ ಗುಣಗಳ ಆವಾಹನವಾಗುತ್ತದೆ.

ಜನರಲ್ಲಿರುವ ಅವರ ಶಕ್ತಿಯನ್ನು ಜಾಗೃತಗೊಳಿಸುವುದು ಸರ್ವೋದಯ ಸೇವಕರ ಕೆಲಸ. ತಮ್ಮ ಶಕ್ತಿಯ ಅರ್ಥ ಆತ್ಮ – ಶಕ್ತಿಯೇ ಆಗುತ್ತದೆ. ಪ್ರಪಂಚ ಜಡ. ಜಡಕ್ಕೆ ಆಕಾರ ಕೊಡುವ ಶಕ್ತಿ ಚೇತನ, ಆ ಚೇತನ ನಾವೇ. ಇಂಥ ನಿಷ್ಠೆ ವ್ಯಕ್ತಿಗಳಲ್ಲಿ ಮತ್ತು ಆ ಮೂಲಕ ಸಮಾಜದಲ್ಲಿ ಬಂದಾಗ ಲೋಕಶಕ್ತಿ ಜಾಗೃತವಾಗುವುದು.

ಸಾಮೂಹಿಕ ಇಚ್ಛಾಶಕ್ತಿಯನ್ನು ನಿರ್ಮಾಣಮಾಡುವುದಾದಲ್ಲಿ ಎಲ್ಲರನ್ನು ಜೊತೆ ಮಾಡಿಕೊಳ್ಳಬೇಕು. ಅದಕ್ಕಾಗಿ ನಾವು ಸಹಾಯಕ ಕ್ರಿಯಾಪದವಾಗಬೇಕೆ ಹೊರತು ಮುಖ್ಯ ಕ್ರಿಯಾಪದವಲ್ಲ. "ಹೀ ಹ್ಯಾಸ್ ಡನ್" ಇದರಲ್ಲಿ ಹ್ಯಾಸ್ ಮುಖ್ಯವಲ್ಲ. ಡನ್ ಕ್ರಿಯಾಪದ. ಹ್ಯಾಸ್ ಸಹಾಯಕ ಕ್ರಿಯಾಪದ. ನಾವು ಸಹಾಯಕ ಕ್ರಿಯಾಪದವಾಗುವ ಮತ್ತು ಮುಖ್ಯ ಕ್ರಿಯಾಪದ ಹುಡುಕುವ ಕಲೆಯನ್ನು ಸಾಧಿಸಿಕೊಳ್ಳಬೇಕು. ನಾವೇ ಸ್ವತಹ ಮುಖ್ಯ ಕ್ರಿಯಾಪದವಾಗಿಬಿಟ್ಟರೆ, ಅಪಾಯವಿದೆ. ಸಹಾಯಕ ಕ್ರಿಯಾಪದವಾದರೆ ನೂರಾರು ಕ್ರಿಯೆಗಳಾಗುವುವು. ಇದಕ್ಕಾಗಿ ನಮ್ರತೆ ಬೇಕು. ಈ ವಿಷಯದತ್ತ ನಮ್ಮ ಗಮನವಿಲ್ಲದಿದ್ದರೆ ನಾವು ಬಹು ಸೀಮಿತಗೊಳ್ಳುವೆವು.

ಬ್ರಹ್ಮವಿದ್ಯಾ ಮಂದಿರಕ್ಕೆ ನಾಲ್ಕುವರ್ಷಗಳಾದವು. ನನ್ನ ಅನುಪಸ್ಥಿತಿಯಲ್ಲಿ ಅದು ನಡೆದುಕೊಂಡು ಬರುತ್ತಿದೆ. ಇದೊಂದು ಬಹುದೊಡ್ಡ ಸಾಧನೆ. ಬ್ರಹ್ಮವಿದ್ಯಾ ಮಂದಿರದ ಮೂಲ ವಿಚಾರ ಯಾರದಾಗಿತ್ತೊ ಅವನು ಬಹು ದೂರ ತಿರುಗಾಡುತ್ತಿದ್ದಾನೆ ಮತ್ತು ಕನ್ಯೆಯರು ಅಳುಕುತ್ತ ಮಂದಿರದ ಸಂಚರನೆ ಮಾಡುತ್ತಿದ್ದಾರೆ. ಇದೊಂದು ಸ್ವತಂತ್ರವಾದ ಪ್ರಯೋಗವೇ ಆಗಿದೆ.ನೇತಾಯುಗದ ಅಂತ್ಯವಾಗಿದೆಯಾದ್ದರಿಂದ ಇನ್ನು ಸಮೂಹ – ಸೇವಕತ್ವ ಜಾರಿಗೆ ಬರುವುದೆಂದು ನಾನು ಅನೇಕ ಸಲ ಹೇಳಿದ್ದೇನೆ.

ಮೈತ್ರಿ – ಸಾಭಾರ

ಹಿಂದ್ ಸ್ವರಾಜ್
ಸಮಕಾಲೀನ ಸಾಂಸ್ಕೃತಿಕ ಮನಸ್ಸು

– ಕಿ.ರಂ.ನಾಗರಾಜ

ಭಾರತೀಯರು ಸ್ವಾತಂತ್ರ್ಯವನ್ನು ಪಡೆಯಬೇಕಾದದ್ದು ಏಕೆ? ಹೇಗೆ? ಎಂಬುದನ್ನು ಅದರ ಎಲ್ಲ ವಿವರಗಳೊಂದಿಗೆ ಹೇಳುವ ಗಾಂಧೀಜಿಯವರ ಒಂದು ಪುಸ್ತಕ ಹಿಂದ್ ಸ್ವರಾಜ್. ಈ ಪುಸ್ತಕವನ್ನು ಗಾಂಧೀಜಿ ಬರೆದದ್ದು ೯೬ ವರ್ಷಗಳ ಹಿಂದೆ. ಅಂದು ಈ ಕೃತಿಗೆ ಎಷ್ಟು ಮಹತ್ವವಿತ್ತೋ, ಅಷ್ಟೇ ಮಹತ್ವ ಈ ಹೊತ್ತಿಗೂ ಇದೆ. ಇನ್ನೂ ಹಲವು ಕಾಲ ಇದೇ ಮಹತ್ವವನ್ನು ಈ ಪುಸ್ತಕ ಉಳಿಸಿಕೊಳ್ಳುತ್ತದೆ ಕೂಡ. ನಾವು ಇಂದು ಉಸಿರಾಡುತ್ತಿರುವುದು ಪ್ರಜಾರಾಜ್ಯದಲ್ಲಿ ಎಂದು ಎನಿಸಿದರೂ ನಿಜವಾದ ಪ್ರಜಾರಾಜ್ಯ ಇನ್ನೂ ಉದಯಿಸಬೇಕಾಗಿದೆ ಎಂಬುದನ್ನು ಈ ಪುಸ್ತಕದ ಪ್ರತಿಪುಟವೂ ಮನವರಿಕೆ ಮಾಡಿಕೊಡುತ್ತದೆ. ಗಾಂಧೀಜಿಯವರ ಸ್ವರಾಜ್ಯದೃಷ್ಟಿ ಇಂಡಿಯಾದ ಬದುಕಿನ ಎಲ್ಲ ಅಂಗಗಳನ್ನು ವಿಶ್ಲೇಷಣೆಗೆ ಹೇಗೆ ಒಳಪಡಿಸುತ್ತದೆ ಎಂಬುದನ್ನು ಇಲ್ಲಿ ಕಾಣುತ್ತೇವೆ.

'ಹಿಂದ್ ಸ್ವರಾಜ್' ಸ್ವಾತಂತ್ರ್ಯತತ್ವ ಹಾಗೂ ಅಂತಹ ಸ್ವಾತಂತ್ರ್ಯವನ್ನು ಪಡೆಯಲು ಎಂಥ ಕ್ರಿಯೆಯ ಅಗತ್ಯವಿದೆ ಎಂಬುದನ್ನು ತುಂಬ ನೇರವಾಗಿ ಹೇಳಿರುವ ಕೃತಿ. ಗಾಂಧೀಜಿಯವರ ರಾಜಕೀಯ ಜಿಜ್ಞಾಸೆ ಅವರು ನಡೆಸಿದ ರಾಜಕೀಯ ಕ್ರಿಯೆ, ಈ ಎಲ್ಲ ಮುಖಗಳ ಪರಿಚಯ ಈ ಪುಸ್ತಿಕೆಯಿಂದ ಆಗುತ್ತದೆ. ವಸಾಹತುಶಾಹಿಯನ್ನು ಕುರಿತು ಚರ್ಚೆ, ಚಿಂತನೆಗಳು ಇಂದಿಗೂ ನಮ್ಮ ಸಂದರ್ಭದಲ್ಲಿ ಅನೇಕ ಮಟ್ಟಗಳಲ್ಲಿ ನಡೆಯುತ್ತಲಿದೆ. ಆ ವಿಚಾರಧಾರೆಗೆ ಗಾಂಧೀಜಿಯವರ 'ಹಿಂದ್ ಸ್ವರಾಜ್' ತುಂಬ ಮಹತ್ವದ ನೆಲಗಟ್ಟನ್ನು ಒದಗಿಸಿಕೊಡುತ್ತದೆ.

ಬ್ರಿಟಿಷರ ವ್ಯಾಪಾರಿ ಪಿಶಾಚ ಹಿಂದೂಸ್ಥಾನದ ಸತ್ವವನ್ನು ಬರಿದು ಮಾಡುತ್ತಿರುವ ಬಗೆಯನ್ನು ಕುರಿತು ಇಲ್ಲಿ ಗಾಂಧೀಜಿಯವರು ಕನಲಿದ್ದಾರೆ. ಗಾಂಧೀಜಿಯವರ ಬ್ರಿಟಿಷ್ ವಿರೋಧಿ ಧೋರಣೆ ಎಷ್ಟು ಮೀಲಭೂತವಾದದ್ದು ಎಂದು ತಿಳಿಯಲು ಈ ದಾಖಲೆ ಸಹಾಯಕ. ಭಾರತದಲ್ಲಿ ನೆಲೆಗೊಂಡಿದ್ದ ವಸಾಹತುಶಾಹಿಗಳಿಗೆ ಪ್ರತಿಕ್ರಿಯಿಸಿದ ಗಾಂಧೀಜಿಯವರ ಈ ದಾಖಲೆ ಕೇವಲ ಭಾರತೀಯ ಸಂದರ್ಭಕ್ಕೆ ಮಾತ್ರ ಸೀಮಿತವಾದುದ್ದಲ್ಲ. ಇಡೀ ಜಗತ್ತಿನ ವಸಾಹತುಶಾಹಿ ಸಂದರ್ಭಕ್ಕೆ ಅನ್ವಯಿಸುವ ತಾತ್ವಿಕ ನಿರ್ದೇಶನದ ಸೂತ್ರಗಳು ಈ ಕೃತಿಯ ಮೂಲಕ ಪ್ರಕಟಗೊಂಡಿದೆ.

ಸಾಮಾನ್ಯವಾಗಿ ಗಾಂಧೀಜಿಯವರ ರಾಜಕೀಯ ಪ್ರಕ್ರಿಯೆ ಹಾಗೂ ಧೋರಣೆಗಳು ತುಂಬ ಸೌಮ್ಯ ಸ್ವರೂಪದ್ದು, ಸತ್ಯಾಗ್ರಹ ಮಾರ್ಗದ್ದು ಎಂದು ಹೇಳುವ ಟೀಕಾಕಾರರಿಗೆ ಅವರ ಧೋರಣೆಗಳ ಬಗೆಗೆ ಸ್ಪಷ್ಟ ಕಲ್ಪನೆ ಇಲ್ಲವೆಂದೇ ಹೇಳಬೇಕು. ಏಕೆಂದರೆ ಗಾಂಧೀಜಿಯವರು ವಸಾಹತುಶಾಹಿಯ ಶಕ್ತಿ, ಸಾಮರ್ಥ್ಯಗಳ ಮಧ್ಯೆ ನಿಂತು 'ಹಿಂದ್ ಸ್ವರಾಜ್' ನ ಘೋಷಣೆಯನ್ನು ಮಂಡಿಸಿದರು. ಅಲ್ಲದೆ ಸ್ವಾತಂತ್ರ್ಯವನ್ನು ಕಳೆದುಕೊಂಡ ದುರ್ಬಲ ಸ್ಥಿತಿಯ ಮಧ್ಯೆ ಹೋರಾಟವೊಂದನ್ನು ನೆಲೆಗೊಳಿಸುವ ಉದ್ದೇಶದಿಂದ ಕೂಡಿದ್ದಾಗಿತ್ತು. ಆದ್ದರಿಂದಲೇ ಗಾಂಧೀಜಿ ಈ ಪುಸ್ತಕವನ್ನು ಕುರಿತು ಹೀಗೆ ಹೇಳಿದರು – 'ಈ ಪುಸ್ತಕವನ್ನು ಎಳೆಯ ಮಗುವಿಗೂ ಕೊಡಬಹುದು. ಇದು ದ್ವೇಷದ ಬದಲು ಪ್ರೀತಿಯನ್ನು ಬೋಧಿಸುತ್ತದೆ. ಹಿಂಸೆಗೆ ಬದಲು ಅತ್ಮತ್ಯಾಗವನ್ನು ಕಲಿಸುತ್ತದೆ. ಪಶುಬಲಕ್ಕೆ ವಿರುದ್ಧವಾಗಿ ಆತ್ಮಬಲವನ್ನು ನಿಲ್ಲಿಸುತ್ತದೆ... ಇದರಲ್ಲಿ ಒಂದು ಪದವನ್ನು ಆದರೂ ಬದಲಿಸಲಾರೆ : ಒಂದೇ ಒಂದನ್ನು ಒಬ್ಬ ಗೆಳತಿಯ ತೃಪ್ತಿಗಾಗಿ ತೆಗೆದುಹಾಕಿದ್ದೇನೆ.' ಇದು ಪುಸ್ತಕವನ್ನು ಕುರಿತು ಗಾಂಧೀಜಿಯವರ ನಿಲುವು.

'ಹಿಂದ್ ಸ್ವರಾಜ್' ಆಧುನಿಕ ನಾಗರಿಕತೆಯನ್ನು ಕುರಿತ ತೀವ್ರ ವಿಮರ್ಶೆಯ ಕೃತಿ. ಬ್ರಿಟಿಷ್ ವಸಾಹತುಶಾಹಿ ರಾಜಕೀಯ ವ್ಯವಸ್ಥೆ ಭಾರತದಲ್ಲಿ ತರುತ್ತಿದ್ದ ಬದಲಾವಣೆಗಳ ಬಗ್ಗೆ ತೀವ್ರವಾದ ವಿಮರ್ಶೆ ಇಲ್ಲಿ ನಡೆಯುತ್ತದೆ. ಗಾಂಧೀಜಿ ಭಾರತಕ್ಕೆ ರೈಲು, ಇಂಗ್ಲಿಷ್ ವೈದ್ಯ ಪದ್ಧತಿ ಹಾಗೂ ಬ್ರಿಟಿಷ್ ನ್ಯಾಯ ಪದ್ಧತಿ ಬಂದದ್ದನ್ನು ತೀವ್ರವಾಗಿ ಖಂಡಿಸುತ್ತಾರೆ. ಈ ಖಂಡನೆ ಮೇಲು ನೋಟಕ್ಕೆ ಅಸಂಗತವೆಂದು ತೋರಬಹುದು. ಆದರೆ ವಸಾಹತುಶಾಹಿ ಭಾರತದಲ್ಲಿ ಭದ್ರವಾಗಿ ಬೇರೂರಲು ಈ ಮೂರು ವ್ಯವಸ್ಥೆಗಳು ಹೇಗೆ ಕಾರಣವಾಗುತ್ತವೆ ಎಂಬುದನ್ನು ಅವರು ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾರೆ. ರೈಲುಗಳು ಬಂದದ್ದರಿಂದ ಕ್ಷಾಮಡಾಮರ, ರೋಗರುಜಿನಗಳು ಕಾಣಿಸಿಕೊಳ್ಳಲು ಕಾರಣವಾಯಿತೆಂಬುದು ಗಾಂಧೀಜಿಯವರ ವಿವರಣೆ, ರೈಲುಗಳಲ್ಲಿ ಕೇಂದ್ರೀಕೃತ ವ್ಯವಸ್ಥೆಯ ಒಂದು ಭಾಗವಾಗಿ ವಿಸ್ತಾರಗೊಂಡು ವಿಕೇಂದ್ರೀಕರಣದ ವ್ಯವಸ್ಥೆಯನ್ನು ಮೂಲಭೂತವಾಗಿ ಪಲ್ಲಟಗೊಳಿಸುತ್ತದೆಂಬುದು ಅವರ ನಿಲುವಾಗಿತ್ತು. ನಾಗರಿಕತೆಯ ಕೆಡುಕಿನ ಸ್ವರೂಪವನ್ನು ತಿಳಿಯಲು ರೈಲು ಒಂದು ಸಂಕೇತವೆಂದು ಅವರು ತಿಳಿಯುತ್ತಾರೆ. ವೇಗದ ಸಂಸ್ಕೃತಿಯನ್ನು ನಿರಾಕರಿಸಿ ಮನುಷ್ಯನ ಸಾಮಾನ್ಯ ಸಾಧ್ಯತೆಗಳನ್ನು ಎತ್ತಿ ಹಿಡಿಯುವ ದೃಷ್ಟಿಯೊಂದು ಇಲ್ಲಿ ಪ್ರಕಟಗೊಂಡಿದೆ. ಆಧುನಿಕ ನಾಕರಿಕತೆಯಲ್ಲಿ ತಿಳಿದೋ, ತಿಳಿಯದಂತೆಯೋ ನಂಬಿಕೆಯನ್ನು ಇಟ್ಟಿರುವ ನಾವು ಗಾಂಧೀಜಿಯವರ ಚಿಂತನೆಯ ಆಳಕ್ಕೆ ಪ್ರವೇಶಿಸುವುದು ತುಸು ಕಷ್ಟವೇ ಆಗಬಹುದು.

ಕೈಗಾರಿಕೀಕರಣವನ್ನು ಪ್ರಬಲವಾಗಿ ನಂಬಿದ ವಸಾಹತುಶಾಹಿ ರಾಜಕೀಯ ಕುತಂತ್ರಕ್ಕೆ ಭಾರತೀಯ ಗ್ರಾಮ ಸಮಾಜ ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನು ಗಾಂಧೀಜಿ ಇಲ್ಲಿ ಮನವರಿಕೆ ಮಾಡಿಕೊಡುತ್ತಾರೆ. ಎಂದರೆ, ಮನುಷ್ಯನ ಸಹಜವಾದ ಶಕ್ತಿ – ಸಾಮರ್ಥ್ಯ, ಸಂಪನ್ಮೂಲವನ್ನು ಹೇಗೆ ರೂಢಿಸಬೇಕೆಂಬುದನ್ನು ಗಾಂಧೀಜಿಯವರ ಶೈಲನ್ನು ಕುರಿತ ವಿಶ್ಲೇಷಣೆಯ ಮೂಲಕ ತಿಳಿಯುತ್ತೇವೆ. ಭಾರತದ ಜನಶಕ್ತಿ ಮತ್ತು ಅದರ ಬಳಕೆಯನ್ನು ಕುರಿತ ವ್ಯಾಖ್ಯೆ ಇದಾಗುತ್ತದೆ.

'ಹಿಂದ್ ಸ್ವರಾಜ್' ಪುಸ್ತಿಕೆಯ ಮಹತ್ವದ ಭಾಗವೆಂದರೆ ಹಿಂದೂ– ಮುಸ್ಲಿಮರ ಐಕ್ಯತೆಗೆ ಸಂಬಂಧಿಸಿದ್ದು. 'ಹಿಂದ್ ಸ್ವರಾಜ್' ಪುಸ್ತಿಕೆಯ ಓದುಗ – ಗಾಂಧೀಜಿಯವರನ್ನು 'ಮುಸಲ್ಮಾನರು ಇಲ್ಲಿಗೆ ಬಂದುದರಿಂದ ನಮ್ಮ ರಾಷ್ಟ್ರೀಯತೆ ಭಂಗವಾಗಲಿಲ್ಲವೇ' ಎಂಬ ನೇರ ಪ್ರಶ್ನೆಯನ್ನು ಕೇಳುತ್ತಾನೆ. ಅದಕ್ಕೆ ಗಾಂಧೀಜಿಯವರ ಉತ್ತರ ತುಂಬ ನೇರ ಮತ್ತು ಖಚಿತವಾದದ್ದು. ಬೇರೆ ದೇಶಗಳಿಂದ ಹೊಸಬರು ಬಂದರೆ ನಮ್ಮ ರಾಷ್ಟ್ರೀಯತೆ ನಷ್ಟವಾಗದು. ಹಾಗೆ ಬಂದ ಜನ ಈ ದೇಶದ ಒಟ್ಟು ಕ್ರಿಯೆಯಲ್ಲಿ ಬೆರೆತುಹೋಗುತ್ತಾರೆ ಎಂದು ಅವರು ಹೇಳುತ್ತಾರೆ.

ಯಾವುದೇ ದೇಶಕ್ಕೆ ಹೊರಗಿನವರನ್ನು ಜೀರ್ಣಿಸಿಕೊಳ್ಳುವ ಶಕ್ತಿ ಬೇಕು ಎಂಬುದು ಗಾಂಧೀಜಿಯವರ ನಿಲುವು. ಅಸಂಖ್ಯ ಮನುಷ್ಯರು, ಅಸಂಖ್ಯ ಧರ್ಮಗಳು ಪರಸ್ಪರ ಸಹಬಾಳ್ವೆಯಲ್ಲಿ ಬದುಕಲು ಸಾಧ್ಯ ಎಂಬುದನ್ನು ಹಿಂದೂಸ್ಥಾನದಂಥ ರಾಷ್ಟ್ರ ಜಗತ್ತಿಗೆ ತೋರಿಸಿಕೊಡಬೇಕು. ಹಿಂದೂಸ್ಥಾನ ಕೇವಲ ಹಿಂದೂಗಳಿಗಾಗಿಯೇ ಇರಬೇಕೆಂದು ಯೋಚಿಸುವುದು ಒಂದು ಅಸಂಗತವಾದ ವಾದ ಎಂಬುದು ಗಾಂಧೀಜಿಯವರ ಖಚಿತವಾದ ನಿಲುವು. ಅಷ್ಟೇ ಅಲ್ಲದೆ, ಹಿಂದೂಸ್ಥಾನದಲ್ಲಿ ಹಿಂದುಗಳೇ ಇರಬೇಕೆಂದು ಯೋಚಿಸುವವರು ಕೇವಲ ಕನಸು ಕಾಣುತ್ತಿದ್ದಾರೆ ಎಂದು ಗಾಂಧೀಜಿ ಹೇಳುತ್ತಾರೆ. ಧರ್ಮ ಮತ್ತು ರಾಷ್ಟ್ರಗಳ ಸಂಬಂಧ ಎಂದಿಗೂ ಖಚಿತವಲ್ಲವೆಂಬುದೇ ಗಾಂಧೀಜಿಯವರ ಸ್ಪಷ್ಟವಾದ ನಿಲುವು.

ಹಿಂದೂ ಮತ್ತು ಮುಸ್ಲಿಮರ ನಡುವೆ ಜನ್ಮ ವೈರವಿದೆ ಎಂದು ತಿಳಿಯುವುದು ಅತ್ಯಂತ ಆತಂಕಕಾರಿಯಾದದ್ದೆಂದು ಗಾಂಧೀಜಿ ಹೇಳುತ್ತಾರೆ. ಇಂತಹ ವೈರದ ಬೀಜವನ್ನು ಬಿತ್ತಿದವರು ನಮ್ಮ ಶತ್ರುವಾದ ವಸಾಹತುಶಾಹಿ ಬ್ರಿಟಿಷರು ಎಂಬುದನ್ನು ಅವರು ಮನವರಿಕೆ ಮಾಡಿಕೊಡುತ್ತಾರೆ. ಅಲ್ಲದೆ ಮುಸ್ಲಿಂ ಸಾಮ್ರಾಟರ ಕೆಳಗೆ ಹಿಂದೂಗಳೂ, ಹಿಂದೂಗಳ ಕೆಳಗೆ ಮುಸ್ಲಿಮರೂ ದೇಶದ ಸಂಸ್ಕೃತಿಯನ್ನು ಬೆಳೆಸಿದರೆಂಬ ನಿತ್ಯ ಸತ್ಯವನ್ನು ಗಾಂಧೀಜಿ ಪ್ರತಿಪಾದಿಸಿದರು. ಇಬ್ಬರಲ್ಲಿಯೂ ಹರಿಯುತ್ತಿರುವ ರಕ್ತ ಒಂದೇ ಎಂಬುದು ಗಾಂಧೀಜಿಯವರ ಅಖಂಡ ನಂಬಿಕೆ.

ಬ್ರಿಟಿಷರ ಕಪಿಮುಷ್ಟಿಗೆ ಸಿಲುಕಿ ಹಿಂದೂಗಳು ಹಾಗೂ ಮುಸ್ಲಿಮರು ಅದರಿಂದ ಬಿಡಿಸಿಕೊಂಡು ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಬೇಕೆಂದು ಅವರು ಸೂಚಿಸುತ್ತಾರೆ. ಗಾಂಧೀಜಿಯವರ ಮಾನವತಾವಾದದ ದಟ್ಟ ನಿಲುವುಗಳು ಸ್ವರಾಜ್ಯ ಕಲ್ಪನೆಯ ಹಿನ್ನೆಲೆಯಲ್ಲಿ ಪ್ರಕಟಗೊಳ್ಳುವುದು ಹೀಗೆ. ಲೋಕದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಣ ಜಗಳ, ಜಾತಿ ಜಾತಿಗಳ ನಡುವಣ ಜಗಳ ಇವೆಲ್ಲ ಇದ್ದದ್ದೆ. ಇಂಥ ಜಗಳ ಹಿಂದೂಗಳು ಹಾಗೂ ಮುಸ್ಲಿಮರ ನಡುವೆ ಮಾತ್ರ ಇದೆ ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ. ಲೋಕದಲ್ಲಿ ಜಗಳದ ಬೀಜವೇ ಸುಟ್ಟು ಸೀಯಬೇಕಲ್ಲದೆ, ಅದನ್ನು ಬೆರಳಿಟ್ಟು ದೊಡ್ಡದು ಮಾಡಿ ತೋರುವುದು ಅನಗತ್ಯ ಎಂಬುದನ್ನು ಗಾಂಧೀಜಿ 'ಹಿಂದ್ ಸ್ವರಾಜ್' ನಲ್ಲಿ ಸ್ಪಷ್ಟಪಡಿಸುತ್ತಾರೆ.

ಇಂಗ್ಲೆಂಡಿನ ಸ್ಥಿತಿಗತಿಗಳನ್ನು ಬಯಲುಗೊಳಿಸುವುದು 'ಹಿಂದ್ ಸ್ವರಾಜ್' ಕೃತಿಯ ಮತ್ತೊಂದು ಉದ್ದೇಶ. ಇಂಗ್ಲೆಂಡಿನ ರಾಜಕೀಯ ಜೀವನ ಭ್ರಷ್ಟಗೊಂಡಿದೆ ಎಂಬುದನ್ನು ಗಾಂಧೀಜಿ ಅತ್ಯಂತ ತೀಕ್ಷ್ಣವಾಗಿ ಪ್ರತಿಪಾದಿಸುತ್ತಾರೆ. ಇಂಗ್ಲೆಂಡನ್ನು ಪಾರ್ಲಿಮೆಂಟಿನ ತಾಯಿ ಎಂದು ಕರೆಯುವುದನ್ನು ಕೇವಲ ಬಂಜೆ ಹಾಗೂ ವೇಶ್ಯೆ ಎಂದು ಅವರು ಹೇಳುತ್ತಾರೆ. ಈ ಎರಡು ಮಾತುಗಳನ್ನು ಬಳಸುವಾಗ ಅವು ತುಂಬ ಕಠೋರವಾದದ್ದು ಎಂಬುದನ್ನು ಗಾಂಧೀಜಿ ಬಲ್ಲರು. ಇಂಗ್ಲೆಂಡಿನ ಪಾರ್ಲಿಮೆಂಟ್ ನಿಷ್ಕ್ರಿಯವಾದದ್ದರಿಂದ ಅದು ಬಂಜೆಯೆಂದೂ, ಹೊರಗಿನ ಒತ್ತಾಯವಿಲ್ಲದೆ ಅದು ಏನನ್ನೂ ಮಾಡದುದಕ್ಕೆ ಅದನ್ನು ವೇಶ್ಯೆಯೆಂದೂ ಅವರು ಕರೆಯುತ್ತಾರೆ. ಇಂಗ್ಲೆಂಡಿನ ಪಾರ್ಲಿಮೆಂಟ್ ಕೇವಲ ಮಾತಿನ ಆಗರವೆಂದು ಅವರು ಟೀಕಿಸುತ್ತಾರೆ. ಆ ಪಾರ್ಲಿಮೆಂಟಿಗೆ ವಾಸ್ತವವಾಗಿ ಯಾರೊಬ್ಬರೂ ಮುಖ್ಯರಲ್ಲ. ತನ್ನ ಪ್ರಭುತ್ವವನ್ನು ಉಳಿಸಿಕೊಳ್ಳುವುದೇ ಅದರ ಮುಖ್ಯ ಗುರಿ. ಹೀಗಾಗಿ ಇಂಗ್ಲೆಂಡಿನ ಪಾರ್ಲಿಮೆಂಟ್ ಸೋಗಲಾಡಿತನದ ಸಂಕೇತವೆಂದು ಅವರು ಕರೆಯುತ್ತಾರೆ.

'ಹಿಂದ್ ಸ್ವರಾಜ್' ಕೇವಲ ಬ್ರಿಟಿಷ್ ವಿರೋಧಿ ದಾಖಲೆ ಮಾತ್ರವಲ್ಲ; ಜಾಗತಿಕ ವಸಾಹತುಶಾಹಿ ವಿರೋಧಿ ದಾಖಲೆ. ಇದರೊಂದಿಗೆ ಪರಕೀಯ ದಾಸ್ಯಕ್ಕೆ ಗುರಿಯಾದ ಜನಮನವನ್ನು ತಲ್ಲಣ, ಕ್ರೌರ್ಯಗಳಿಂದ ಪಾರು ಮಾಡುವ ಸೂಕ್ಷ್ಮವಾದ ವಿಧಿ-ವಿಧಾನಗಳು ಈ ಕೃತಿಯಿಂದ ಹೊರಪಡುತ್ತದೆ. ಜಗತ್ತಿನ ಅನೇಕ ಮಹೋನ್ನತ ರಾಜಕೀಯ ದಾಖಲೆಗಳ ಮಧ್ಯೆ 'ಹಿಂದ್ ಸ್ವರಾಜ್' ಗೆ ಒಂದು ಅರ್ಥಪೂರ್ಣ ಸ್ಥಾನವಿದೆ. ಗಾಂಧೀಜಿಯವರ ರಾಜಕೀಯ ನಿಲುವುಗಳನ್ನು ಸೌಮ್ಯವಾದಿ ಮಾರ್ಗವೆಂದು ತಿಳಿಯುವವರಿಗೆ ಈ ಕೃತಿಯಲ್ಲಿ ತಕ್ಕ ಉತ್ತರವಿದೆ. ಅಂಥ ತಿಳುವಳಿಕೆಗೆ ಈ ಕೃತಿ ಒಂದು ಸವಾಲು.

'ಹಿಂದ್ ಸ್ವರಾಜ್' ಗ್ರಾಮೀಣ ಮತ್ತು ನಗರ ಸಂಸ್ಕೃತಿಯ ನಡುವಣ ಕಂದರವನ್ನು ಗಂಭೀರವಾಗಿ ವಿಶ್ಲೇಷಿಸುತ್ತದೆ. ನಾಗರಿಕತೆಯಲ್ಲಿ ಸಮತೋಲ ಮತ್ತು ಸೃಷ್ಟಿಶೀಲತೆ ಹಾಗೂ ಕ್ರಿಯಾಶೀಲತೆಯನ್ನು ಕಾಪಾಡುವ ಹೊಣೆಗಾರಿಕೆ ಎಂದಿಗಿಂತ ಇಂದು ಹೆಚ್ಚು ಖಚಿತಪಡುತ್ತಿದೆ. ಯಂತ್ರ ನಾಗರಿಕತೆಯ ವ್ಯಾಮೋಹ ಮತ್ತು ಮಾನವತೆಯ ಅಳಿವು-ಉಳಿವುಗಳ ಪ್ರಶ್ನೆಯನ್ನು ಈ ದಾಖಲೆಗಿಂತ ಹೆಚ್ಚು ಸ್ಪಷ್ಟವಾಗಿ ಮುಖಾಮುಖಿಯಾಗಿಸುವ ಕೃತಿಯನ್ನು ನಾವು ಕಾಣಲಾರೆವು. ಇಂಗ್ಲಿಷ್ ವಿದ್ಯಾಭ್ಯಾಸ, ಅದರ ಕ್ರೌರ್ಯಗಳು, ಅದರಿಂದ ಉಂಟಾದ ಮಾನವತೆಯ ಅಪಮೌಲ್ಯವನ್ನು ಈ ಕೃತಿ ಸೂಕ್ಷ್ಮವಾದ ಚಿಂತನೆಗೆ ಗುರಿಪಡಿಸಿದೆ.

ಈ ಕೃತಿ ಒಂದು ಸಂವಾದದ ಸ್ವರೂಪದ ಕೃತಿ. ಓದುಗನ ಪ್ರಶ್ನೆಗಳಿಗೆ ಸಂಪಾದಕ ಉತ್ತರ ಕೊಡುವ ಕ್ರಮದಲ್ಲಿ ಇದು ನಿರೂಪಿತಗೊಂಡಿದೆ. ಈ ಕೃತಿಯಲ್ಲಿನ ಓದುಗನೂ ಗಾಂಧಿಯೇ. ಆ ಓದುಗನ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿರುವ ಸಂಪಾದಕನೂ ಗಾಂಧಿಯೇ. ಅದರಿಂದಾಗಿ ಗಾಂಧೀಜಿ ಇಲ್ಲಿ ಪ್ರವಾದಿಯಂತೆ ಕಾಣುವುದಿಲ್ಲ. ಮಿಗಿಲಾಗಿ ತನ್ನ ಅಂತರಂಗದ ಶೋಧನೆಯನ್ನು ನಿರಂತರವಾಗಿ ಮಾಡಿಕೊಳ್ಳುತ್ತಿರುವ ಆತ್ಮಶೋಧಕನಾಗಿ ಕಾಣುತ್ತಾರೆ. ಗಾಂಧೀಜಿಯ ವಿಕಾಸವಿರುವುದು ಇಂತಹ ದಟ್ಟ ಅಂತರಂಗದ ವಿಮರ್ಶೆಯಲ್ಲಿ.

'ಹಿಂದ್ ಸ್ವರಾಜ್' ಸ್ವಾತಂತ್ರ್ಯದ ಅಗತ್ಯತೆ ಮತ್ತು ಮನುಷ್ಯನ ಮನಸ್ಸನ್ನು ಒಂದುಗೂಳಿಸಿ ನೋಡುವ ಮಹೋನ್ನತ ತತ್ವವನ್ನು ಅನಾವರಣಗೊಳಿಸುವ ಕೃತಿ. ರಾಜಕೀಯ, ಧರ್ಮ, ಸಂಸ್ಕೃತಿಗಳು ಪ್ರತ್ಯೇಕಗೊಂಡ ವಿಚಾರಗಳಾಗದೆ ಅವೆಲ್ಲ ಮಾನುಷಸತ್ವವನ್ನು ಸಮೃದ್ಧಗೊಳಿಸುವಲ್ಲಿ ಎಂಥ ಪಾತ್ರ ಪಡೆಯಬೇಕೆಂಬುದರತ್ತ ಗಮನಗೊಂಡದ್ದು. ಸಮಕಾಲೀನ ರಾಜಕಾರಣ ಅಧಿಕಾರಾರೂಢ ನೆಲೆಗಳಿಂದ ಪ್ರೇರಿತವಾದ ಒಂದು ತಂತ್ರ, ಗಾಂಧಿ ಸ್ವರಾಜ್ಯ ದೃಷ್ಟಿ ಒಂದು ತಂತ್ರವಲ್ಲ; ಅದೊಂದು ಮಾನವೀಕರಣದ ಸಾಧನ. ರಾಜಕೀಯ ಮಾನವೀಕರಣದಿಂದ ದೂರವಾದಂತೆಲ್ಲ ಭ್ರಷ್ಟತೆ, ಸ್ವಜನ ಪಕ್ಷಪಾತ, ಹಣದ ಹುಚ್ಚು ಹಾಗೂ ಕ್ರೌರ್ಯಗಳಿಗೆ ಹತ್ತಿರವಾಗುತ್ತ ಬರುತ್ತದೆ. ಆದ್ದರಿಂದಲೇ ವಸಾಹತುಶಾಹಿ, ಬಂಡವಾಳಿಗ ಪದ್ಧತಿ, ಜಾತಿ-ಧರ್ಮಗಳ ಹಲ್ಲುಗುರುಗಳು ಮಾನವೀಕರಣದಿಂದ ಹೇಗೆ ಸಾಧುಗೊಳಿಸಬೇಕೆಂಬುದು ಗಾಂಧೀಜಿಯ ಪ್ರಶ್ನೆ? ಅಂತೆಯೇ ನಮ್ಮ ಸಂದರ್ಭದ ಪ್ರಶ್ನೆ.


ಸಾಭಾರ - ಸಂಚಯ ಜುಲೈ-ಆಗಸ್ಟ್ ೨೦೦೮

ಭಾಗ್ಯಗಳ ಉರುಳು!

– ಸುರೇಂದ್ರ ಕೌಲಗಿ

ರಾಜಕಾರಣದಲ್ಲಿ ರಾಜಕೀಯ ಪಕ್ಷಗಳ ಪಾತ್ರ ಯಾವಾಗಲೂ ವಿಮರ್ಶೆಗೆ ಮತ್ತು ಚರ್ಚೆಗೆ ಒಳಗಾಗಬೇಕಾದುದು ಅಗತ್ಯ. ಪಕ್ಷಗಳ ಉದ್ದೇಶ ಅಧಿಕಾರ ಗ್ರಹಣವೇ ಆಗಿರುತ್ತದೆ. ಅಧಿಕಾರದಲ್ಲಿರದ ಪಕ್ಷ ಮತ್ತದರ ರಾಜಕಾರಣಿ ನಾಯಕರ ಅವಸ್ಥೆ ನೀರಿನಿಂದ ಹೊರತೆಗೆದ ಮೀನಿನಂತಿರುತ್ತದೆ. ಅಧಿಕಾರದ ಸ್ಥಾನವಿಲ್ಲದೆ ಅವರು ಅರೆಘಳಿಗೆ ಕೂಡ ಇರಲು ಸಾಧ್ಯವಿಲ್ಲ. ಅಧಿಕಾರ ಕೈಗೆ ಬಂತೆಂದರೆ ಅದನ್ನು ದೀರ್ಘಕಾಲ ತನ್ನ ಕೈಯಲ್ಲಿ ಇರಿಸಿಕೊಳ್ಳಲು ಅಧಿಕಾರಸ್ಥ ರಾಜಕಾರಣಿಗಳು ಒಂದಿಲ್ಲ ಒಂದು ಸುತಂತ್ರ ಅಥವಾ ಕುತಂತ್ರ ಮಾಡುತ್ತಲೇ ಇರಬೇಕಾಗುತ್ತದೆ. ಕೆಲವೊಂದು ಸಲ ಸುತಂತ್ರ ಮತ್ತು ಕುತಂತ್ರಗಳು ಹೆಣೆದುಕೊಂಡು ಬಿಡುತ್ತವೆ. ಆಗ ಪ್ರಜೆಗಳು ಸಂತೋಷ ಮತ್ತು ಅಸಂತೋಷಗಳ ಮಧ್ಯೆ ಸಿಕ್ಕಿಹಾಕಿಕೊಂಡು ತಮ್ಮ ವಿವೇಚನಾ ಶಕ್ತಿಯನ್ನೇ ಕಳೆದುಕೊಳ್ಳುತ್ತಾರೆ. ಜನತೆ ವಿವೇಚನಾ ಶಕ್ತಿಯನ್ನು ಕಳೆದುಕೊಳ್ಳಲೆಂಬುದೇ ಅಧಿಕಾರಸ್ಥ ರಾಜಕಾರಣಿಗಳ ಇಚ್ಛೆಯಾಗಿರುತ್ತದೆ. ಈಗ ಕರ್ನಾಟಕದಲ್ಲಿ ಪ್ರಾರಂಭವಾಗಿರುವ ನಾನಾ ವಿಧವಾದ ಭಾಗ್ಯಗಳ ಪರ್ವವನ್ನು ಜನತೆಯ ವಿವೇಚನಾ ಶಕ್ತಿಹರಣದ ಪರ್ವವೆಂದೇ ಕರೆಯಬಹುದು! ಜನತೆ ತನ್ನ ವಿವೇಚನಾ ಶಕ್ತಿಯನ್ನು ಕಳೆದುಕೊಳ್ಳುವುದಕ್ಕೆ ಕಾರಣವೇನೆಂದರೆ ಸರ್ಕಾರ ಕೊಡಮಾಡುವ ಎಲ್ಲ ಭಾಗ್ಯಗಳ ಹಿಂದೆ ಜನತೆಯ ಕಲ್ಯಾಣವೇ ಪ್ರಧಾನವಾಗಿದೆ, ಬಡತನದ ನಿರ್ಮೂಲನವೇ ಗುರಿಯಾಗಿದೆ, ಪೌಷ್ಠಿಕಾಂಶದ ಕೊರತೆಯ ನಿವಾರಣೆಯೇ ಮುಖ್ಯವಾಗಿದೆ ಎಂಬಂಥ ವೆಲ್‌ಫೇರ್ ಸ್ಟೇಟ್‌ನ ಉದ್ದೇಶಗಳನ್ನು ಮಾಧ್ಯಮಗಳ ಮೂಲಕ ಪ್ರಚಾರ ಪಡಿಸುವಲ್ಲಿ ಸರ್ಕಾರ ಯಶಸ್ವಿಯಾಗುತ್ತದೆ. ಜನತೆ ಅದನ್ನು ನಂಬುತ್ತದೆ ಮತ್ತು ಕುರಿಗಳಂತೆ ಹಳ್ಳಕ್ಕೆ ಬೀಳುತ್ತದೆ; ಚುನಾವಣೆಯ ಸಂದರ್ಭ ಬಂದಾಗಲೆಲ್ಲ ಭಾಗ್ಯಗಳನ್ನು ಕರುಣಿಸಿದ ಅಧಿಕಾರಸ್ಥ ಪಕ್ಷಕ್ಕೆ ಮತಕೊಡುತ್ತದೆ. ಇತ್ತೀಚೆಗೆ ನಡೆದ ಗ್ರಾಮಪಂಚಾಯಿತಿಗಳ ಚುನಾವಣೆಯಲ್ಲಿ ತನ್ನ ಪಕ್ಷದ ಸದಸ್ಯರು ಬಹುಮತದಿಂದ ಆಯ್ಕೆಯಾಗಿದ್ದಾರೆ. ಇದಕ್ಕೆ ಕಾರಣ ನಮ್ಮ ಸರ್ಕಾರ ಕೈಗೊಂಡ ಜನಪರ ಕಾರ್ಯಕ್ರಮಗಳೇ ಎಂದು ಸಿದ್ಧರಾಮಯ್ಯ ಹೇಳಿದ್ದಾರೆ. ಇದರ ಅರ್ಥ ಭಾಗ್ಯಗಳ ಕೊಡುಗೆಯ ಹಿಂದಿನ ಉದ್ದೇಶ ರಾಜಕೀಯ ಸ್ಪರ್ಧೆಯೇ ಹೊರತು ಜನತೆಯನ್ನು ಬುದ್ಧಿವಂತರನ್ನಾಗಿ ಮತ್ತು ಕಾಯಕಸ್ಥರನ್ನಾಗಿ ಮಾಡುವ

ಉದ್ದೇಶವಂತು ಖಂಡಿತವಲ್ಲ. ಭಾಗ್ಯಗಳ ಸರಣಿ ಪ್ರಾರಂಭವಾದಾಗಿನಿಂದ ಫಲಾನುಭವಿಗಳ ಮಾನಸದಲ್ಲಿ ಮತ್ತು ಆರ್ಥಿಕವಾಗಿ ಅವರ ಜೀವನದಲ್ಲಿ ಏನೆಲ್ಲ ಸಕಾರಾತ್ಮಕ ಪರಿವರ್ತನೆಗಳಾದವು ಎಂಬುದರ ಬಗ್ಗೆ ಇದುವರೆಗೆ ನಿಖರವಾದ ಮತ್ತು ವೈಜ್ಞಾನಿಕವಾದ ಸಾಮಾಜಿಕ ಪರಿಶೀಲನೆ ನಡೆದಿಲ್ಲ. ಹಾಗೆಯೇ ಇಡೀ ಸಮಾಜ ವ್ಯವಸ್ಥೆಯ ಮೇಲೆ ಪರಿಣಾಮ ಏನಾಗಿದೆಯೆಂಬುದರ ಬಗ್ಗೆಯೂ ಪರಿಶೋಧನೆಯಾಗಿಲ್ಲ. ಕಡು ಬಡವರಿಗೆ, ಬಡವರಿಗೆ ಮತ್ತು ಅವಕಾಶ ವಂಚಿತರಿಗೆ ನೆರವು ನೀಡಬೇಕಾದುದು ಸರ್ಕಾರದ ಕರ್ತವ್ಯ. ನೆರವು ಪೂರ್ತ ಪುಕ್ಕಟೆಯಾಗಿರಬೇಕೆ ಅಥವಾ ರಿಯಾಯಿತಿ ದರದಲ್ಲಿ ಇರಬೇಕೆ ಎಂಬುದನ್ನು ಕೂಡ ಆಲೋಚಿಸಬೇಕಾಗುತ್ತದೆ. ಆದರೆ ಸಂಪೂರ್ಣ ಉಚಿತ ಕೊಡುವುದು ಅದರಲ್ಲಿಯೂ ಮುಖ್ಯವಾಗಿ ಅಕ್ಕಿಯಂಥ ಜೀವನಾವಶ್ಯಕವಾದ ಪದಾರ್ಥಗಳನ್ನು ಉಚಿತವಾಗಿ ಕೊಡುವುದು ಖಂಡಿತವಾಗಿಯೂ ತಪ್ಪು. ಜೀವನಕ್ಕೆ ಅನ್ನ ಸಂಪಾದಿಸಬೇಕಾದುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯ. ದುಡಿಯದೆಯೆ ತಿನ್ನುವ ಮನುಷ್ಯ ಕಳ್ಳನೆಂದೆ ಪರಿಭಾವಿಸುವ ಸಂಸ್ಕೃತಿ ಈ ನೆಲದ್ದಾಗಿದೆ. ಜನರ ದುಡಿಮೆಗೆ ಅವಕಾಶ ಮಾಡಿಕೊಡುವ ಉದ್ಯೋಗಗಳನ್ನು ಸೃಷ್ಟಿಸುವ ಹಾಗೂ ಅಂಥಹ ದುಡಿಮೆಗೆ ಬೇಕಾದ ಕೌಶಲ್ಯವನ್ನು ಜನರಲ್ಲಿ ಸೃಷ್ಟಿಸುವ ಕೆಲಸ ಸರ್ಕಾರ ಮಾಡಬೇಕೆ ವಿನಹ ಬಡತನದ ಹೆಸರಿನಲ್ಲಿ ಅಕ್ಕಿಯನ್ನು ಉಚಿತವಾಗಿ ಕೊಡುವುದು ಮತ್ತು ನಿರುದ್ಯೋಗದ ಹೆಸರಿನಲ್ಲಿ ಭತ್ಯೆ ಕೊಡುವುದು ಮುಂತಾದ ವಿಷಯಗಳು ಆರ್ಥಿಕವಾಗಿ ಸಮೃದ್ಧವಾಗಿರುವ ಪಾಶ್ಚಿಮಾತ್ಯ ದೇಶಗಳ ರೀತಿ. ಆ ದೇಶಗಳಲ್ಲಿ ಜನಸಂಖ್ಯೆಯು ಕಡಿಮೆ. ಯಾಂತ್ರೀಕರಣ ಮುಖ್ಯವಾಗಿದೆ. ಆದರೆ ಭಾರತದಲ್ಲಿ ದೊಡ್ಡ ಜನಸಂಖ್ಯೆಯಿದೆ; ಅಪಾರವಾದ ಮಾನವಶಕ್ತಿಯಿದೆ; ಪ್ರಾಕೃತಿಕ ಸಂಪತ್ತು ಇದೆ; ಹವಾಮಾನವು ಪೂರಕವಾಗಿದೆ; ಈಗ ದೇಶಕ್ಕೆ ಬೇಕಾಗಿರುವುದು ದುಡಿಯುವ ಕೈಗಳು ಮತ್ತು ಶ್ರಮ ಜೀವಿಗಳು. ದುಡಿಮೆಗೆ ಮುಖ್ಯ ಕಾರಣ ಮತ್ತು ಪ್ರೇರಣೆ ಅನ್ನ ಸಂಪಾದನೆ. ಅನ್ನ ಸಂಪಾದನೆಯ ಅಗತ್ಯವನ್ನೇ ತಪ್ಪಿಸುವ ಕೆಲಸವನ್ನು ಸರ್ಕಾರ ಮಾಡಿದರೆ ದೇಶದ ಗತಿಯೇನು? ಆದ್ದರಿಂದ ಅನ್ನಭಾಗ್ಯ, ವಸ್ತ್ರಭಾಗ್ಯ, ಕ್ಷೀರಭಾಗ್ಯ ಮುಂತಾದ ಭಾಗ್ಯಗಳ ಕೊಡುಗೆಯನ್ನು ಯಾವುದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರಲಿ, ಅದನ್ನು ನಿಲ್ಲಿಸುವುದು ಒಳ್ಳೆಯದು. ಭಾಗ್ಯಗಳು ದೌರ್ಭಾಗ್ಯವಾಗದಿರಲೆಂದು ಆಶಿಸೋಣ.



ಮಾತೃಭಾಷೆಯ ಶಿಕ್ಷಣ ಯಾಕೆ ಬೇಕು?

– ಕೆ.ಪಿ.ಸುರೇಶ್

ಮಾತೃಭಾಷೆಯಲ್ಲಿ ಶಿಕ್ಷಣ ಎಂಬುದು ನಿರ್ಣಾಯಕ ಮಜಲನ್ನು ತಲುಪಿದೆ. ಈ ಹಿಂದೆ ಕರ್ನಾಟಕದ ಮಟ್ಟಿಗೆ ಇದ್ದ ಕನ್ನಡ ಕಡ್ಡಾಯ ಎಂಬುದನ್ನು ಬಲಾಢ್ಯ ಖಾಸಗೀ ಇಂಗ್ಲಿಷ್ ಲಾಬಿ ಮೂಲೆಗುಂಪು ಮಾಡಿದ್ದಷ್ಟೇ ಅಲ್ಲ ಕಾನೂನಿನ ಎದುರು ಅದೊಂದು ಅಸಂವಿಧಾನಿಕ ಕ್ರಮ ಎಂದು ನ್ಯಾಯಾಲಯವನ್ನು ಕನ್ವೀನ್ಸ್ ಮಾಡುವಲ್ಲಿ ಯಶಸ್ವಿಯಾಗಿದೆ. ಸರ್ಕಾರದ ಮರು ಅಹವಾಲನ್ನೂ ಸರ್ವೋಚ್ಚ ನ್ಯಾಯಾಲಯ ವಜಾ ಮಾಡಿದ ಕಾರಣ ನಮ್ಮ ಸರ್ಕಾರ ಹೊಸ ಎರಡು ಕಾಯಿದೆಗಳನ್ನು ಶಾಸನ ಸಭೆಯಲ್ಲಿ ಮಂಡಿಸಿ ಅಂಗೀಕಾರ ಪಡೆದುಕೊಂಡಿದೆ.

ಆದರೆ ಇದಕ್ಕೆ ರಾಷ್ಟ್ರಪತಿಗಳು ಸಹಿ ಮಾಡಿದರೆ ಮಾತ್ರಾ ಅದು ಕಾನೂನಾಗುತ್ತದೆ!! ಕರ್ನಾಟಕದ ಮಟ್ಟಿಗೆ ಸರ್ಕಾರದ ಈ ಹೆಜ್ಜೆ ಕಣ್ಣಿಗೆ ಮಣ್ಣೆರಚುವ ಸಂಗತಿಯಾ ಅಲ್ಲ ಸಾಚಾ ನಡೆಯಾ ಗೊತ್ತಿಲ್ಲ. ಇಂಗ್ಲಿಷ್ ಪತ್ರಿಕೆಯೊಂದರಲ್ಲಿ ವರದಿಯಾದಂತೆ ಬಹುತೇಕ ಹೊಸತಲೆಮಾರಿನ ಶಾಸಕರು ಈ ಕನ್ನಡ ಮಾಧ್ಯಮ ಕಡ್ಡಾಯದ ಕಾನೂನಿಗೆ ವಿರುದ್ಧವಾಗಿದ್ದಾರೆ. ಇದು ಜಾರಿಯಾಗಲು ಸಾಧ್ಯವಿಲ್ಲ ಎಂಬ ವಾಸ್ತವದ ಅರಿವಿನಲ್ಲೇ ಅವರು ಶಾಸನ ಸಭೆಯಲ್ಲಿ ಕೈಯೆತ್ತಿದ್ದಂತೆ..!!

ನಾವೀಗ ತೀವ್ರ ಬಿಕ್ಕಟ್ಟಿನಲ್ಲಿದ್ದೇವೆ. ಮಾತೃಭಾಷೆ ಶಾಲೆಯ ಮಾಧ್ಯಮವಾಗಿ; ಕಲಿಕೆಯ ಮಾಧ್ಯಮವಾಗಿ ಯಾಕೆ ಮುಖ್ಯ ಎಂದು ಹೆತ್ತವರಿಗೆ ಹೇಳಲು ಸಾಧ್ಯವೇ ಆಗದ ಸ್ಥಿತಿಯಲ್ಲಿದ್ದೇವೆಯೋ ಅಥವಾ ಜಾಗತೀಕರಣದ ಇಂಗ್ಲಿಷ್ ಗರ ಬಡಿದ ಹೆತ್ತವರು ನಮ್ಮ ಮಾತು ಕೇಳುತ್ತಿಲ್ಲವೋ ಗೊತ್ತಾಗುತ್ತಿಲ್ಲ ಈ ಸಮೂಹಸನ್ನಿಯ ಅಸಹನೆಯನ್ನು ವಾದವಾಗಿ ಮಂಡಿಸಿ ಮಗುವಿನ ಭಾವನಾತ್ಮಕ ಕಲಿಕಾ ಭಾಗವನ್ನೇ ನಾಶ ಮಾಡಲಾಗುತ್ತಿದೆ. ಇತ್ತೀಚೆಗಿನ ಶಿಕ್ಷಣ ಅಧ್ಯಯನ ಮುಖ್ಯವಾಗಿ ಕಂಡುಕೊಂಡಿರುವುದು ಐಕಿ ಗಿಂತ ಇಕಿ ಮುಖ್ಯ ಎಂಬುದು. ಇದು ಶಿಕ್ಷಕರಿಗೆ

ಗೊತ್ತು. ಆದರೆ ಇದನ್ನು ಹೆತ್ತವರಿಗೆ ಪರಿಣಾಮಕಾರಿಯಾಗಿ ಹೇಳಲು ಇವರಿಗೆ ಸಾಧ್ಯವಾಗಿಲ್ಲ. ಶಾಲೆ ನಡೆಸುವ ಆಡಳಿತಗಾರರಿಗೆ ಇದು ಗೊತ್ತು, ಉದ್ಯಮ ಪತಿಗಳಿಗೆ ಇದು ಗೊತ್ತು. ಆದರೆ ಅವರಿಗೆ ಮಗು ಬೆಳೆದು ಭಾವನಾತ್ಮಕವಾಗಿ ಪ್ರೌಢವಾಗುವುದು ಬೇಕಿಲ್ಲ.!!

ಇಂಗ್ಲೀಷ್ ಮಾಧ್ಯಮದಲ್ಲಿ ಓದಿದರೆ ಉದ್ಯೋಗ ಸಿಗುತ್ತದೆ ಎಂಬ ವಿಷಯ, ಬಿಟ್ಟಿ ಸೀಮೆಎಣ್ಣೆ ಕೊಡುತ್ತಾರೆ ಎಂಬ ಗಾಳಿ ಸುದ್ದಿಯಷ್ಟೇ ನಿಜ. ವೃತ್ತಿಪರ ಶಿಕ್ಷಣ ಮಾತ್ರಾ ಮುಖ್ಯವೆನಿಸುವಂತೆ ಮಾಡಿ, ಅದರಲ್ಲಿ ಸಾಮಾಜಿಕ ಜ್ಞಾನವಾಗಲೀ ಮನೋವಿಕಾಸಕ್ಕೆ ಬೇಕಾದ ಒಂದೆಳೆಯೂ ಇಲ್ಲದಂತೆ ಮಾಡಿ, ಈ ಮಕ್ಕಳನ್ನು ತಾಂತ್ರಿಕ ಕೌಶಲ್ಯ ಮಾತ್ರಾ ಇರುವ ಮೂಳೆ ಮಾಂಸದ ಯಂತ್ರವನ್ನಾಗಿ ರೂಪಿಸುವ ಬಗೆ ಭೀಕರ. ಆದರೆ ಆಧುನಿಕ ಉದ್ಯಮ ಪತಿಗಳಿಗೆ ಇಂಥಾ ಮನೋ ವೈಕಲ್ಯ ಇರುವ ಪಾರ್ಶ್ವ ಬೆಳವಣಿಗೆ ಹೊಂದಿರುವ ಯುವಕರೇ ಬೇಕು. ಬೇರೆ ಯಾವ ಜ್ಞಾನ, ಗಮನಗಳಿಲ್ಲದೇ, ಯಾವ ಉಸಾಬರಿಯೂ ಇಲ್ಲದೇ ಕೆಲಸ ಮಾಡುವ ಪಶು ಸದೃಶ ಮಾದರಿಗಳಾಗಬೇಕು.


ನಾನೇ ಕಂಡಿರುವ ಹಾಗೇ ಬೆಂಗಳೂರಿನ ಈ ಮಾದರಿಯಲ್ಲಿ ಓದಿ, ಕೆಲಸ ಪಡೆದು ಈಗ ಮಕ್ಕಳನ್ನೂ ಅದೇ ಲಕ್ಷ ರೂಪಾಯಿ ಫೀಸಿನ ಶಾಲೆಗೆ ಸೇರಿಸಿರುವ ಪಡೆಗೆ, ನಮ್ಮ ಹಬ್ಬ ಹರಿದಿನಗಳು, ಚರಿತ್ರೆ, ಪುರಾಣ, ಅಜ್ಜಿಕಥೆ, ತರಕಾರಿ, ತಿಂಡಿಗಳ ಹೆಸರು, ಹಕ್ಕಿ, ಪ್ರಾಣಿ, ಕ್ರಿಮಿ ಕೀಟ ವೃಣ ಕಾಯಿಲೆ ಯಾವುದೂ ಗೊತ್ತಿಲ್ಲದೇ ಕೂತಿದ್ದಾರೆ. ಖಿಡಿಡಿಡಿಂತಿ ಅಂದರೇ ಕನ್ನಡದಲ್ಲೇನು ಎಂದು ಸಲೀಂ ಆಲಿ ಬುಕ್ಕು ಹುಡುಕುವ ವಿಪರೀತ ಆಸಕ್ತಿಯ ಮಗುವೂ ಅಮೆರಿಕನ್ನರೆದುರು ಹಾಸ್ಯಾಸ್ಪದವಾಗಿ ಕಾಣಿಸುತ್ತೆ ಎಂದು ಹೇಗೆ ಹೇಳೋಣ?.

ಯುರೋಪಿನ ದೇಶಗಳಲ್ಲಿ ನಮ್ಮ ಸಂಸ್ಕೃತಿ, ಚರಿತ್ರೆಯ ಬಗ್ಗೆ ಅವಜ್ಞೆ ಬಂದರೆ; ದೇಶೀಯ ಜ್ಞಾನದ ಕುರಿತು ಅಜ್ಞಾನ ಪ್ರದರ್ಶಿಸಿದರೆ ಇಡೀ ದೇಶಕ್ಕೆ ಅವಮಾನ ಅನ್ನಿಸುತ್ತೆ. ನಮ್ಮಲ್ಲಿ ಸ್ಪರ್ಧಾತ್ಮಕ ವೈಷಮ್ಯಕ್ಕಷ್ಟೇ ಈ ಹೆಮ್ಮೆ ಸೀಮಿತವಾಗಿದೆಯಷ್ಟೇ ಹೊರತು ನಮ್ಮನ್ನು ಆಕ್ರಮಿಸಿಕೊಳ್ಳುತ್ತಿರುವ ವ್ಯಾಪಾರೀಕರಣ/ ಅನುಕರಣಶೀಲತೆ ಬಗ್ಗೆ ಯಾವ ಹೆತ್ತವರೂ ತಲೆಕೆಡಿಸಿಕೊಂಡಂತಿಲ್ಲ. ಪೋಟ್ಲಾರಿ ಇಂಗ್ಲಿಷ್ ಮಾತಾಡುವುದು ಹೆಮ್ಮೆ ಅನಿಸುತ್ತೆ.!!

ಧಾರವಾಡದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಎರಡು ದಿನಗಳ ಮಾತೃಭಾಷೆ ಮಾಧ್ಯಮ ಕುರಿತ ರಾಷ್ಟ್ರೀಯ ಸಮಾವೇಶ ಇಂಥಾ ಕ್ರೈಸಿಸ್ ಬಗ್ಗೆ ಚರ್ಚೆಯ ಆರಂಭ. ನಮ್ಮ ಶಿಕ್ಷಣ – ಸಂಸ್ಕೃತಿ ವಲಯದ ಅತ್ಯುತ್ತಮ ಮನಸುಗಳು ಸೇರಿ ಚರ್ಚಿಸುವ ಈ ವೈಚಾರಿಕ ಸಂಗಮ ನಮ್ಮ ಕಾಲದ ದಿಟ್ಟ ಹೆಜ್ಜೆ.

ಮಾತೃಭಾಷೆಯ ಶಿಕ್ಷಣ ಎಷ್ಟು ಮುಖ್ಯ ಎನ್ನುವುದನ್ನು ಜಾಗತೀಕರಣದ ಜಾದೂವಿನಲ್ಲಿ ಮರೆತಿರುವ ನಮ್ಮ ಆಳುವ ವರ್ಗಕ್ಕೂ; ಸ್ವರ್ಗ ದೊರಕೀತು ಮಕ್ಕಳ ಮೂಲಕ ಎಂದು ನಂಬಿರುವ ಹೆತ್ತವರಿಗೂ; ಆಯ್ಕೆಯನ್ನು ವೈಯಕ್ತಿಕ ಸ್ವಾತಂತ್ರ್ಯವೆನ್ನುವ ಕಿರು ವ್ಯಾಖ್ಯಾನದಲ್ಲಿ ಇಟ್ಟು ಕೈಚೆಲ್ಲುವ ನ್ಯಾಯಾಂಗಕ್ಕೂ ಅರಿವು ಮೂಡಿಸುವ ಕೆಲಸ ಇದು. ಜನಪರ ಆಂದೋಲನದಲ್ಲಿ ಪ್ರಜಾಸತ್ತೆಯ ನಾಲ್ಕನೇ ಸ್ತಂಭವೆನಿಸಿರುವ ಮಾಧ್ಯಮವೂ ಕೇವಲ ವರದಿಗೆ ಸೀಮಿತವಾಗದೇ ಕ್ರಿಯಾಶೀಲ ಪಾತ್ರ ವಹಿಸಿದರೆ, ಈ ಜಾಗತಿಕ ಸತ್ಯಕ್ಕೊಂದು ಸಾಂಸ್ಥಿಕ ನೆಲೆ ಸಿಕ್ಕೀತು.

ಪರಿಸರ



ಕುದಿಯುತ್ತಿದೆ ಭೂಮಿ
ಸುಡುತ್ತಿದೆ ಭಾನು
ಮಧ್ಯದಲ್ಲಿ ನಾವು ಸುಟ್ಟ ಜೇನು

ಸ್ಥಿತಿ ಹೀಗಾದರೆ ಮುಂದಿನ ಪೀಳಿಗೆ
ಮಾಡುವುದಾದರೂ ಏನು?
ಕಾಡು ಚಿತ್ರಿಸಿ ಬಣ್ಣಬಳಿದು
ಶಹಬ್ಬಾಸ್‌ಗಳಿಸುವುದೇನೋ ಉತ್ತಮ

ಆದರೆ ಪರಿಸರದ ನಾಶದ ಪಿಡುಗಿಗೆ
ಹಾಕುವುದೆಂದು ಪೂರ್ಣ ವಿರಾಮ?
ಸಣ್ಣ ಕಾಳಿನಾಸೆಗೆ ಇಲಿ ಬೋನಿಗೆ ಬಿದ್ದಂತೆ
ಅತಿ ಆಸೆಗೆ ಬಲಿ ಬಿದ್ದು ನಾಶದ ಪಾಶ
ನಾವೇ ಕೂಗಿ ಕರೆದಂತೆ

ಮನಸೊಳಗೆ ಕವಿದರೆ ಮೋಡ
ಕಣ್ಣಿನ ಮೂಲಕ ಹನಿ ಉದುರುವುದು
ನೋಡಾ ಈಗಲಾದರೂ ಎಚ್ಚೆತುಕೋ ಮೂಢ
ಪರಿಸರವನ್ನು ನಾಶಮಾಡುವುದು ಬೇಡಾ.

– ಟಿ.ಶ್ರೀಲತ



ನಿವೃತ್ತ ಪ್ರಾಧ್ಯಾಪಕಿಯೊಬ್ಬರ ದುಃಖದ ಮಾತು

– ಲೀಲಾ ಅಪ್ಪಾಜಿ

ಮಂಡ್ಯ ಜಿಲ್ಲೆಗೆ ಲೀಲಾ ಅಪ್ಪಾಜಿ ಪರಿಚಿತ. ಮಂಡ್ಯ ನಗರದಲ್ಲಿರುವ ಮಹಿಳಾ ಸರ್ಕಾರಿ ಪದವಿ ಕಾಲೇಜಿನ ಪ್ರಾಂಶುಪಾಲರಾಗಿದ್ದವರು. ಶೈಕ್ಷಣಿಕ ಚಟುವಟಿಕೆಗಳಲ್ಲಿ ಮಹೋನ್ನತಿ ಸಾಧಿಸುವುದರ ಜೊತೆಗೆ ಶಿಕ್ಷಣೇತರ ಸಾಮಾಜಿಕ ಚಟುವಟಿಕೆಗಳಲ್ಲಿಯೂ ಮಹೋನ್ನತಿಯನ್ನು ಕಾಲೇಜು ಸಾಧಿಸಲು ಕಾರಣವಾದ ಲೀಲಾ ಅಪ್ಪಾಜಿಯವರು ತಮ್ಮ ಸಾರ್ಥಕ ಸೇವೆಯಿಂದ ಇತ್ತೀಚೆಗಷ್ಟೇ ನಿವೃತ್ತರಾಗಿದ್ದಾರೆ. ನಿವೃತ್ತಿಯ ನಂತರ ತಕ್ಷಣ ತಮ್ಮ ಫೇಸ್‌ಬುಕ್‌ನಲ್ಲಿ ವ್ಯಕ್ತಪಡಿಸಿದ ಭಾವನೆ ಇಲ್ಲಿದೆ – ಸಂ

ಕಾಲೇಜಿನಿಂದ ಮತ್ತು ಕಾಲೆಳೆಯುವವರಿಂದ ಮುಕ್ತಳಾದೆ. ಬದುಕು ಸುಂದರ...ಅದನ್ನು ಬದುಕಿ ತೋರಿಸಬೇಕು ಎಂದು ನಂಬಿದ ನಾನು ನಡೆದ ದಾರಿಯಲ್ಲಿ ಅನೇಕ ಸಲ ನರಕ ದರ್ಶನವನ್ನು ಮಾಡಿಕೊಂಡು ಬಂದೆ... ಆರು ತಿಂಗಳಿಂದ ಹೇಳುತ್ತಾ ಬಂದಿದ್ದೆ... ವೃತ್ತಿಯಿಂದ ನಿರ್ಗಮಿಸುವಾಗ ಯಾವ ಬೀಳ್ಕೊಡುಗೆಯ ಕಾರ್ಯಕ್ರಮ, ಉಡುಗೊರೆ ಬೇಡ. ಬರಿಯ ಹಾರೈಕೆ ಸಾಕು ಎಂದು. ನನ್ನ ಅದೇ ಹಠಮಾರಿ ನಿಲುವು. ಕಾರಣ ಬಿಡುಗಡೆ ಪಡೆದೆ ಅಂದರೆ ಕಾಲೇಜಿನೊಡನೆ ಸಂಬಂಧ ಅಂತ್ಯ ಎಂದು ಮಾತ್ರ. ಕಾಲೇಜನ್ನು ಭಾವನಾತ್ಮಕವಾಗಿ ಸಂಬಂಧಿಸಿಕೊಂಡಿದ್ದ ನನಗೆ ಆ ಕರುಳಬಳ್ಳಿಯಿಂದ ಕಳಚಿಕೊಳ್ಳುವುದು ಕಷ್ಟವಾಗಿತ್ತು. ಕುರ್ಚಿ ನನಗೆ ಒಲ್ಲದ ಜಾಗ...ಕೆಲಸ ಮಾಡಬಹುದೆಂಬ ಆಸೆಗೆ ಒಪ್ಪಿದ ಮುಳ್ಳು ಅದು..ಅಕ್ಷರಶಃ ಅದನ್ನು ಮುಳ್ಳಾಗಿಸಿ ಅದರಿಂದ ಪಾರಾಗುವಂತೆ ಮಾಡಿದರು.

ಅಕ್ಷರಶಃ ಅದೊಂದು ತಿಪ್ಪೆಯಾಗಿದ್ದ ಗುಂಡಿ. ತಿಪ್ಪೆಯಿಂದಲೂ, ಕಸದಿಂದಲೂ, ರಸಹುಡುಕಬಯಸುವ ನಾನು ಆ ಜಾಗಕ್ಕೆ ಕಾಯಕಲ್ಪ ಕೊಡಬಯಸಿದ್ದೆ....ತಿಪ್ಪೆ ಮನಸ್ಸು ಹಾಗೆ ಉಳಿಯದೇ, ಉಪಯುಕ್ತವಾಗಿ ಪರಿವರ್ತಿತವಾಗಬೇಕು. ಇದು ನನ್ನ ಗುರಿ.... ತಿಪ್ಪೆಮನಸ್ಸುಗಳನ್ನು ಬದಲಾಯಿಸಲಾರೆ.... ಬದಲಾಯಿಸಲೂ ಆಗಲಿಲ್ಲ... ಅವು ಮತ್ತೂ ತಿಪ್ಪೆಯೇ ಆದವು.

ಆದರೆ ತಿಪ್ಪೆಯನ್ನು ಬದಲಾಯಿಸಲು ಸಾಧ್ಯ.... ತಿಪ್ಪೆಯಾಗಿದ್ದ ಜಾಗವೇ ಸುತ್ತಮುತ್ತಣ ಗಿಡ–ಮರಗಳಿಗೆ ನೀರು ಪೂರಣ ನೆಲೆಯಾದಂತೆ, ನೆರಳು ಬಯಸಿ ಬರುವ ಮಕ್ಕಳಿಗೆ ಕುಳಿತುಕೊಳ್ಳಲು ತಾಣವೂ ಆಗಬೇಕು ಎಂಬ ಕಲ್ಪನೆ ಹುಟ್ಟಿದಂತೆ... ಹುಟ್ಟುತ್ತಾ ಹೋದಂತೆ ಜನ್ಮ ತಳೆದ ಅಂಗಣ.....

ಕಾಲೇಜಿಗೆ ಸ್ಮರಣೀಯ ಕೊಡುಗೆ ಕೊಡುವ ಆಸೆಯಿಂದ ನಾನು ಸ್ವಂತ ಹಣದಿಂದ ಕಟ್ಟಿಸಿದ್ದು ಈ ಇಂಗುಗುಂಡಿ. ಒಂದು ಲಕ್ಷಕ್ಕೂ ಹೆಚ್ಚಿನ ಹಣದಿಂದ ನನ್ನ ಕಲ್ಪನೆಯಂತೆ ಕಟ್ಟಿಸಿದ ಈ ಇಂಗುಗುಂಡಿ... ನನ್ನ ಕಣ್ಣೀರನ್ನು ಇಂಗಿಸಿಕೊಂಡ ಗುಂಡಿಯೂ ಹೌದು.... ನಾನು ಆ ಕಾಲೇಜಿನಲ್ಲಿ ಉಂಡ ಕಹಿ, ಕಷ್ಟ, ದುಗುಡ ಎಲ್ಲವನ್ನೂ ಪ್ರತಿನಿಧಿಸುವ ಪ್ರತಿನಿಧಿ. ಅಲ್ಲಿಯೇ ಅದನ್ನು ಕಟ್ಟಿಸಲು ಮತ್ತೊಂದು ಕಾರಣ.... ಪಕ್ಕದಲ್ಲೇ ನನ್ನ ಜೀವದ ಚಿಟ್ಟೆ ಪಾರ್ಕ..

ಇದು ಕನಸಿನ ಗ್ರಂಥಾಲಯ... ಕೊನೆಯ ಹಂತದಲ್ಲಿದೆ. ಒಂದಿಷ್ಟು ಬಣ್ಣದ ಸ್ಪರ್ಷ ಆದರೆ ಕೆಲಸ ಮುಗಿದಂತೆ... ಅದರೊಳಗೆ ನನ್ನ ಕೊಡುಗೆಯ ಗಾಂಧಿ ಹಾಲ್... ನಮ್ಮಂತ ಹಿರಿಯ ವಿದ್ಯಾರ್ಥಿನಿಯರ ಕೊಡುಗೆಯ ಕೊಠಡಿ ಕೊನೆಯ ಹಂತದಲ್ಲಿದೆ...

ಇನ್ನು ಬರಿಯ ವಿದಾಯ... ಬಹುಶಃ ಈ ಅಂಗಳದಲ್ಲಿ ಕಾಲೇಜಿನ ಯಾವ ಚಿತ್ರಗಳೂ ಬರಲಾರವು....ಅವೆಲ್ಲಾ ನನ್ನ ಭಾವಮಯ ಕೋಶದಲ್ಲಿ ಬಂಧಿ....

ಜನಪದ ಸೇವಾ ಟ್ರಸ್ಟ್ ಸಮಾಚಾರ

೫೬ ವರ್ಷಗಳ ಸೇವೆಯನ್ನು ಪೂರೈಸಿರುವ ಶ್ರೀಕೃಷ್ಣ ಕನ್ನಡ ಶಿಶುವಿಹಾರವು ೨೦೧೫-೧೬ನೇ ಸಾಲಿನ ತನ್ನ ಚಟುವಟಿಕೆಗಳನ್ನು ಜೂನ್ ಒಂದರಿಂದ ಪ್ರಾರಂಭಿಸಿತು.

******

ಕೆಲ ಸಾಮಾಜಿಕ ಮತ್ತು ಆಡಳಿತಾತ್ಮಕವಾದ ತಾಂತ್ರಿಕ ಸಮಸ್ಯೆಗಳಿಂದಾಗಿ ಕೆಲವು ಮಕ್ಕಳನ್ನು ದತ್ತು ಕೊಡಲು ನಿಧಾನವಾಗುತ್ತದೆ; ಕಾಲ ಉರುಳುತ್ತದೆ. ಆ ಮಕ್ಕಳು ಕೇಂದ್ರದಲ್ಲಿಯೇ ದೊಡ್ಡವರಾಗುತ್ತಾರೆ. ಹಾಗೆ ದತ್ತು ಕೇಂದ್ರದಲ್ಲಿ ಉಳಿದುಕೊಂಡಿರುವ ಒಬ್ಬ ಬಾಲಕ ಹಾಗೂ ಓರ್ವ ಬಾಲಕಿಯನ್ನು ಸ್ಥಳೀಯ ಸರ್ಕಾರಿ ಶಾಲೆಗೆ ಒಂದನೇ ತರಗತಿಗೆ ಸೇರಿಸಲಾಯಿತು. ಚಿಕ್ಕ ವಯಸ್ಸಿನ ಒಂದು ಹೆಣ್ಣು ಮಗುವನ್ನು ಶಿಶುವಿಹಾರಕ್ಕೆ ಸೇರಿಸಲಾಯಿತು. ಸುಮಾರು ಒಂದುವರ್ಷದ ಆರು ತಿಂಗಳ ದತ್ತು ಕೇಂದ್ರದ ಹೆಣ್ಣು ಮಗುವೊಂದನ್ನು ಮೈಸೂರು ನಗರದ ನಿವಾಸಿಗಳೊಬ್ಬರಿಗೆ ದತ್ತು ಪೂರ್ವ ಪೋಷಣೆಗೆ ಕೊಡಲಾಯಿತು. ದತ್ತು ಕೇಂದ್ರಕ್ಕೆ ತಾಯಿಯಿಂದ ಸ್ವಯಂ ಪ್ರೇರಿತವಾಗಿ ಸರ್ಕಾರಕ್ಕೆ ಒಪ್ಪಿಸಲ್ಪಟ್ಟ ಸುಮಾರು ಒಂದು ವರ್ಷದ ಹೆಣ್ಣು ಮಗು ಸೇರ್ಪಡೆಗೊಂಡಿತು.

******

ಹೊಸ ಜೀವನದಾರಿ ಕೇಂದ್ರದಲ್ಲಿ ಫಲಬಿಟ್ಟಿದ್ದ ಸಾವಯವ ಮಾವಿನ ಫಸಲನ್ನು ಮೈಸೂರು ನಗರದಲ್ಲಿರುವ ಒಂದು ಸಾವಯದ ಉತ್ಪನ್ನ ಮಾರಾಟ ಮಳಿಗೆಗೆ ಕೊಡಲಾಯಿತು.

******

ಜೀವನಶಾಲೆಯ ಹದಿನೆಂಟು ಮಕ್ಕಳನ್ನೊಳಗೊಂಡ ಎರಡು ದಿನಗಳ ಶಿಬಿರ ಹೊಸ ಜೀವನದಾರಿ ಕೇಂದ್ರದಲ್ಲಿ ನಡೆಯಿತು. ಸುಜಾತ ಬೆಳವಾಡಿ ಮತ್ತು ಶ್ರೀಮತಿ. ನಾಗರಾಜ್ ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು.

******

ಪ್ರವಾಸೋದ್ಯಮದೊಂದಿಗೆ ಸಂಸ್ಕೃತಿ ಅಧ್ಯಯನವನ್ನು ಸೇರಿಸಿಕೊಂಡಿದ್ದ ಸಂಸ್ಥೆಯ ಸುಮಾರು ಇಪ್ಪತ್ತು ಜನ ಪ್ರವಾಸಿಗರು ಹೊಸ ಜೀವನದಾರಿ ಕೇಂದ್ರಕ್ಕೆ ಭೇಟಿಕೊಟ್ಟರು. ಅಲ್ಲಿ ನಡೆಯುತ್ತಿರುವ ಖಾದಿ ಕೈಗಾರಿಕೆ ಮತ್ತು ಇತರ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದರು. ತಮ್ಮ ಭೇಟಿಯ ಜ್ಞಾಪಕಾರ್ಥವಾಗಿ ಖಾದಿ ಬಟ್ಟೆ ಖರೀದಿಸಿದರು.

******

ಒರಿಸ್ಸಾ ರಾಜ್ಯದ ಕಟಕ್ ನಗರದ ಸಾಧ್ವಿ ಸಿಂದೂರ ಎಂಬ ವಿದ್ಯಾರ್ಥಿನಿ ಟ್ರಸ್ಟಿಗೆ ಎರಡು ದಿನಗಳ ಭೇಟಿ ಕೊಟ್ಟಳು. ಅವಳು ಸಾಗರಕ್ಕೆ ಸಂಬಂಧಿಸಿದ ವಿಜ್ಞಾನ ಓದುತ್ತಿದ್ದಾಳೆ.

ಜನಪದ ನಿಲಯದ ಅಂತರಂಗದಲ್ಲಿ – ೧೩೫



ಜನಪದ ಸೇವಾ ಟ್ರಸ್ಟ್ ಪ್ರಾರಂಭವಾದಾಗಿನಿಂದಲೂ ವಿವಿಧ ಕ್ಷೇತ್ರದ ಸಮಾಜಸೇವಕರನ್ನು ಆಕರ್ಷಿಸುತ್ತಾ ಬಂದಿದೆ. ಅವರಲ್ಲಿ ಕೆಲವರು ಸ್ವಯಂ ಪ್ರೇರಣೆಯಿಂದ ಬಂದವರಾಗಿದ್ದರೆ ಇನ್ನು ಕೆಲವರು ವಿವಿಧ ಸಂಸ್ಥೆಗಳ ಪರವಾಗಿ ಬಂದವರಾಗಿದ್ದರು. ಅಂಥವರಲ್ಲಿ ಕೆಲವರು ಟ್ರಸ್ಟಿನಲ್ಲಿದ್ದುಕೊಂಡು ಅದರ ವಿವಿಧ ಸೇವಾ ಕಾರ್ಯಾಗಳಲ್ಲಿ ತಮ್ಮ ಅಭಿರುಚಿಯಂತೆ ಕೆಲಸ ಮಾಡಿ ಹೋಗಿದ್ದಾರೆ. ತಾವು ಸ್ವತಃ ವಿಶೇಷ ಅನುಭವವನ್ನು ಪಡೆದುದಲ್ಲದೆ ಟ್ರಸ್ಟಿನ ಬೆಳವಣಿಗೆಗೂ ಕಾರಣರಾಗಿದ್ದಾರೆ. ಅವರೆಲ್ಲರನ್ನು ಸ್ಮರಿಸುವುದು ಒಂದು ಆಸಕ್ತಿದಾಯಕ ಸಂಗತಿ. ದೇಶ ವಿದೇಶಗಳಿಂದ ಟ್ರಸ್ಟ್ ಸ್ವಯಂಸೇವಕರನ್ನು ಆಕರ್ಷಿಸುವುದಕ್ಕೆ ಕಾರಣವೆಂದರೆ ಅದು ಸ್ವಯಂ ಸೇವಾ ಸಂಸ್ಥೆಯಾಗಿ ಗಾಂಧಿ ವಿಚಾರದ ಆಧಾರದ ಮೇಲೆ ರಚನಾತ್ಮಕ ಕಾರ್ಯಗಳನ್ನು ಮಾಡಿಕೊಂಡು ಬಂದಿರುವುದು. ಅದು ಈ ವರೆಗೂ ಸ್ವಯಂಸೇವಾ ಸಂಸ್ಥೆಯಾಗಿ ಉಳಿದಿದೆಯೇ ಹೊರತು ಸರ್ಕಾರೇತರ (ಎನ್.ಜಿ.ಒ) ಆಗಿ ಅಲ್ಲ. ಈ ಕಾರಣದಿಂದಾಗಿ ವಿವಿಧ ಕ್ಷೇತ್ರಗಳಲ್ಲಿಯ ಸ್ವಯಂ ಸೇವಕರು ಆಗಾಗ ಇಲ್ಲಿಗೆ ಬಂದು ತಮ್ಮ ಅನುಭವವನ್ನು ತಿಳಿಸುವುದರ ಜೊತೆಗೆ ಇಲ್ಲಿಂದ ಹೊಸ ಅನುಭವ ಪಡೆದುಕೊಂಡು ಹೋಗುತ್ತಾರೆ. ಆದರೆ ಇತ್ತೀಚೆಗೆ ಹೊಸ ಪೀಳಿಗೆಯವರಲ್ಲಿ ಸ್ವಯಂ ಸೇವೆಯ ಪ್ರೇರಣೆ ಕಡಿಮೆಯಾಗುತ್ತಿದೆ. ಪ್ರೌಢಶಾಲಾ ವ್ಯಾಸಂಗ ಮುಗಿಸಿದ ಎಲ್ಲ ವಿದ್ಯಾರ್ಥಿಗಳು ತಾವು ಮುಂದೆ ಡಾಕ್ಟರ್ ಆಗಬೇಕು, ಇಂಜಿನಿಯರ್ ಆಗಬೇಕು, ಐ.ಎ.ಎಸ್ ಅಧಿಕಾರಿಯಾಗಬೇಕು ಎಂದೆಲ್ಲಾ ಹೇಳುತ್ತಾರೆಯೇ ವಿನಃ ಸಾಮಾಜಿಕ ಕ್ಷೇತ್ರದಲ್ಲಿಯೇ ಆಗಲಿ, ಕಲಾ ಕ್ಷೇತ್ರದಲ್ಲಿಯೇ ಆಗಲಿ ಮತ್ತು ಸಾಹಿತ್ಯ ಕ್ಷೇತ್ರದಲ್ಲಿಯೇ ಆಗಲಿ ಪ್ರವೇಶಿಸುವುದಾಗಿ ಹೇಳುವುದಿಲ್ಲ. ಸ್ವಯಂ ಸೇವಾ ಕೆಲಸವೆಂದರೆ ಶುಷ್ಕ ಕೆಲಸವೆಂದೇ ಅವರ ಭಾವನೆ. ಇಂಥ ಪರಿಸ್ಥಿತಿಯಲ್ಲಿ ಯುವಕರಿಗೆ ಸ್ವಯಂ ಸೇವಾ ಕ್ಷೇತ್ರದಲ್ಲಿ ಕೆಲಸ ಮಾಡುವ ಆಸಕ್ತಿಯುಳ್ಳವರಿಗೆ ಪ್ರೋತ್ಸಾಹ ಕೊಡುವ ಕೆಲಸವನ್ನು ಮಾಡುತ್ತಿದೆ. ಆ ದೃಷ್ಟಿಯಿಂದ "ಜೀವನಶಾಲೆ" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜೀವನ ಶಾಲೆಯ ಮೂಲಕ ಶಿಕ್ಷಣದೊಂದಿಗೆ ಪ್ರತ್ಯಕ್ಷ ಜೀವನಾನುಭವವನ್ನು ಮತ್ತು

ಜೀವನದ ಬಗ್ಗೆ ಸಕಾರಾತ್ಮಕ ದೃಷ್ಟಿಯನ್ನು ವಿದ್ಯಾರ್ಥಿಗಳಲ್ಲಿ ಉಂಟುಮಾಡುವ ಉದ್ದೇಶ ಜೀವನಶಾಲೆಯದಾಗಿದೆ. ಆ ಶಾಲೆಯ ಎಂ.ಕೆ.ಮನೋಜ್ ಎಂಬ ವಿದ್ಯಾರ್ಥಿ ಬರೆದ ಮಾತುಗಳನ್ನು ಇಲ್ಲಿ ಗಮನಿಸಬಹುದು. ಅವನು ಹೇಳುವುದೇನೆಂದರೆ "ಜೀವನಶಾಲೆ" ಸೇರಿ ಆರು ತಿಂಗಳಾಯಿತು. ಪುಸ್ತಕ ಓದುವುದರೊಂದಿಗೆ ಪಕ್ಷಿ ವೀಕ್ಷಣೆ ಮಾಡುತ್ತಿದ್ದೆವು. ಇದರಿಂದ ಸುತ್ತ ಮುತ್ತಲಿನ ಪರಿಸರ ಅಧ್ಯಯನ ಮಾಡುವುದನ್ನು ಕಲಿತೆನು. ಗುಂಪಾಗಿ ಹಾಡುತ್ತೇವೆ. ಶ್ರಮದಾನಕ್ಕೆ ಮಹತ್ವದ ಸ್ಥಾನವಿದೆ. ಹೀಗಾಗಿ ಮೈ ಬಗ್ಗಿಸಿ ಕೆಲಸಮಾಡುವುದನ್ನು ಕಲಿತೆ. ಇದರಿಂದ ತಾಳ್ಮೆ, ಮನೋಧೈರ್ಯ ಬಂದಿತು. ಬೇರೆ ಬೇರೆ ವಿಷಯಗಳ ಬಗ್ಗೆ ಇರುವ ಸಾಕ್ಷ್ಯ ಚಿತ್ರಗಳನ್ನು ನೋಡುತ್ತಿದ್ದೆವು ಮತ್ತು ಆ ಬಗ್ಗೆ ಚರ್ಚೆಮಾಡುತ್ತಿದ್ದೆವು. ಗಾಳಿ, ನೀರು ಮತ್ತು ಆಹಾರ ಕಲುಶಿತಗೊಳ್ಳುತ್ತಿವೆ ಅದನ್ನು ಜನರಿಗೆ ತಿಳಿಸಲು ಬದನವಾಳು ಸುಸ್ಥಿರ ರಾಷ್ಟ್ರೀಯ ಸಮಾವೇಶದ ಪಾದಯಾತ್ರೆಯಲ್ಲಿ ಪಾಲ್ಗೊಂಡೆವು. ಸುಮಾರು ಎಂಬತ್ತು ಕಿಲೋಮೀಟರ್ ಯಾತ್ರೆ ಮಾಡಿ ಹೊಸ ಅನುಭವ ಪಡೆದೆವು. ನನಗೂ ಕೂಡ ಏನನ್ನಾದರೂ ಶ್ರದ್ಧೆಯಿಂದ ಮಾಡಬೇಕೆಂದು ಅನಿಸಿತು. ಅದರಿಂದಾಗಿ ನಾನು ಕೈ ಮಗ್ಗದ ಮೇಲೆ ನೇಯ್ಗೆ ಮಾಡುವುದನ್ನು ಕಲಿತೆನು. ನಾಟಕದ ಕಾರ್ಯಾಗಾರ ಮತ್ತೊಂದಿಷ್ಟು ಹೊಸ ಅನುಭವಗಳನ್ನು ತಂದುಕೊಟ್ಟಿತು. ಗುಂಪಿನಲ್ಲಿ ಕೆಲಸಮಾಡುವ ರೀತಿಯನ್ನು ಕಲಿತೆನು."

ಹೊಸ ಜೀವನದಾರಿ ಕೇಂದ್ರದಲ್ಲಿ ಆಗಾಗ್ಗೆ ನಡೆಯುವ ಶಿಬಿರಗಳಲ್ಲಿ ಸುತ್ತಲಿನ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಶಿಬಿರದಲ್ಲಿ ಭಾಗವಹಿಸಿ ಇನ್ನೂ ಹೆಚ್ಚಿನ ಅನುಭವ ಪಡೆಯಬೇಕೆಂದು ಕೆಲವರು ಮುಂದೆ ಬರುತ್ತಾರೆ. ಮುಂದೆ ಬಂದ ಯುವಕರಲ್ಲಿ ಒಬ್ಬರನ್ನೊ ಅಥವಾ ಇಬ್ಬರನ್ನೊ ಟ್ರಸ್ಟ್ ಆಯ್ಕೆಮಾಡಿಕೊಂಡು ಅವರಿಗೆ ಫೇಲೋಶಿಪ್ ಕೊಡಲಾಗುತ್ತದೆ. ಅವರು ಟ್ರಸ್ಟಿನ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ತಿಳುವಳಿಕೆ ಹಾಗೂ ಅನುಭವವನ್ನು ವಿಸ್ತರಿಸಿಕೊಳ್ಳುತ್ತಾರೆ. ಇಂಥ ಫೇಲೋಶಿಪ್ ಪಡೆದು ಟ್ರಸ್ಟಿನಲ್ಲಿ ಈಗ ಶ್ರೀರಂಗಪಟ್ಟಣದ ಅಶೋಕ ಎಂಬ ಬಿ.ಕಾಂ ಪದವೀಧರ ಯುವಕ ಕಳೆದ ಒಂದು ತಿಂಗಳಿಂದ ಅನುಭವ ಪಡೆಯುತ್ತಿದ್ದಾರೆ. ಯುವಕರನ್ನು ಸ್ವಯಂ ಸೇವೆಯಲ್ಲಿ ತೊಡಗಿಕೊಳ್ಳುವಂತೆ ಮಾಡಲು ನಡೆದಿರುವ ಈ ಪ್ರಯತ್ನ ಸಫಲವಾದಲ್ಲಿ ಕ್ರಮೇಣ ಇನ್ನೂ ಕೆಲವು ಯುವಕರು ಮುಂದೆ ಬರಬಹುದು. ಅದನ್ನು ಕಾದು ನೋಡಬೇಕು.

ಸರ್ವೋದಯ ಆಂದೋಲನದ ಮುನ್ನಡೆ

ಭಾರತದ ಪ್ರಾಚೀನ ಉದ್ಯೋಗಗಳಲ್ಲಿ ಒಂದಾದ ಕೈ ಮಗ್ಗ ನೇಕಾರಿಕೆ ಅಳಿಯುತ್ತಿರುವ ಸಂದರ್ಭದಲ್ಲಿ ಬದನವಾಳು ಸತ್ಯಾಗ್ರಹ ಎಂಬ ಚಳುವಳಿ ಕಳೆದ ಏಪ್ರಿಲ್ ೨೦೧೫ರಲ್ಲಿ ನಡೆಯಿತು. ಅದರ ಅಂಗವಾಗಿ ಸುಸ್ಥಿರ ರಾಷ್ಟ್ರೀಯ ಸಮಾವೇಶವೊಂದು ಬದನವಾಳಿನಲ್ಲಿಯೇ ನಡೆಯಿತು. ಆ ಸಮಾವೇಶದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯ ಚಿಂತಕರು, ಕಲಾಕಾರರು, ಸಾಹಿತಿಗಳು ಮತ್ತು ರೈತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಮಾವೇಶವು ಜಾಗತಿಕ ಮಟ್ಟದಲ್ಲಿಯೂ ಗಮನ ಸೆಳೆಯಲು ಸಮರ್ಥವಾಯಿತು. ಕೈ ಮಗ್ಗ ಉದ್ಯೋಗ ಉಳಿಸುವ ಮೂಲಕ ಖಾದಿಯನ್ನು ಉಳಿಸುವ ಪ್ರಯತ್ನವು ಅದರಲ್ಲಿ ಇತ್ತು. ಬದನವಾಳುವಿನಲ್ಲಿ ನಡೆದ ಸುಸ್ಥಿರ ಬದುಕಿನ ರಾಷ್ಟ್ರೀಯ ಸಮಾವೇಶದ ಆಶಯವನ್ನು ಸಾಧ್ಯಗೊಳಿಸುವ ನಿಟ್ಟಿನತ್ತ ಚರ್ಚೆಗಳು, ಮಾತುಕತೆಗಳು ನಡೆದಾದ ನಂತರ ಗ್ರಾಮೋದ್ಯೋಗ ಆಂದೋಲನವನ್ನಾಗಿ ಪರಿವರ್ತಿಸಿ ಸುಸ್ಥಿರ ಬದುಕಿನ ಆಯಾಮವನ್ನು ಜನತೆಗೆ ಪರಿಚಯಮಾಡಿಕೊಡಲು ತೀರ್ಮಾನಿಸಿತು. ಬದನವಾಳಿನಲ್ಲಿ ಪ್ರಾರಂಭವಾದ ಈ ಆಂದೋಲನ ಸರ್ವೋದಯ ವಿಚಾರಕ್ಕೆ ಪೂರಕವಾಗಿದೆಯಷ್ಟೆ ಅಲ್ಲ ಅದನ್ನು ಬೆಂಬಲಿಸುವಂಥದ್ದು ಆಗಿದೆ. ಮುಖ್ಯವಾಗಿ ಯುವಕರನ್ನು ಆಕರ್ಷಿಸಿರುವ ಈ ಆಂದೋಲನವನ್ನು ಕರ್ನಾಟಕ ಸರ್ವೋದಯ ಮಂಡಲಿ ಪೂರ್ಣವಾಗಿ ಸಮರ್ಥಿಸುತ್ತದೆ ಮತ್ತು ಬೆಂಬಲಿಸುತ್ತದೆ. ಆದ್ದರಿಂದ ರಾಜ್ಯದಲ್ಲಿರುವ ಲೋಕಸೇವಕರು ಮತ್ತು ಸರ್ವೋದಯ ಮಿತ್ರರು ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು ರಾಷ್ಟ್ರೀಯ ಗ್ರಾಮೋದ್ಯೋಗ ಆಂದೋಲನದಲ್ಲಿ ಭಾಗವಹಿಸಬೇಕಾಗಿ ಎಲ್ಲರನ್ನು ಕೋರುತ್ತದೆ. ಆಂದೋಲನದ ಪ್ರಣಾಳಿಕೆ ಈ ಕೆಳಗೆ ಕಾಣಿಸಿದಂತೆ ಇದೆ.

ಪ್ರಣಾಳಿಕೆ

ಬದನವಾಳು ಸತ್ಯಾಗ್ರಹದ ಮುಂದುವರಿಕೆಯಾಗಿ ರಾಷ್ಟ್ರೀಯ ಗ್ರಾಮೋದ್ಯೋಗ ಆಂದೋಲನವೊಂದಕ್ಕೆ ಚಾಲನೆ ನೀಡಲು ಬದನವಾಳು ಸತ್ಯಾಗ್ರಹ ಸಮಿತಿಯು ನಿರ್ಧರಿಸಿದೆ. ರಾಷ್ಟ್ರೀಯ ಗ್ರಾಮೋದ್ಯೋಗ ಆಂದೋಲನವು ಒಂದು ಜನಚಳುವಳಿಯಾಗಿರುತ್ತದೆ. ಜನರಿಂದಲೇ ಸಂಪನ್ಮೂಲವನ್ನು ಕ್ರೋಢೀಕರಿಸಿ ಜನರ ಭಾಗವಹಿಸುವಿಕೆಯಲ್ಲಿ ಕಟ್ಟಲಾಗುವ ರಾಷ್ಟ್ರೀಯ ಆಂದೋಲನ ಇದಾಗಲಿದೆ.

ಸತ್ಯಶೋಧಕ ಸಮಿತಿ

ರಾಷ್ಟ್ರೀಯ ಗ್ರಾಮೋದ್ಯೋಗ ಆಂದೋಲನಕ್ಕೆ ಪೂರ್ವಭಾವಿ ತಯಾರಿಯಾಗಿ ಒಂದು ಸತ್ಯಶೋಧಕ ಸಮಿತಿಯನ್ನು ರಚಿಸಲಾಗಿದೆ. ಸತ್ಯಶೋಧಕ ಸಮಿತಿಯು ಮುಂದಿನ ನಾಲ್ಕು ತಿಂಗಳ ಕಾಲ ರಾಜ್ಯಾದ್ಯಂತ ಸಂಚರಿಸಿ, ವಿವಿದೆಡೆಗಳಲ್ಲಿ ಸಭೆಗಳನ್ನು ನಡೆಸಿ, ವಿವಿಧ ಗ್ರಾಮೋದ್ಯೋಗ ಕೇಂದ್ರಗಳನ್ನು ಸಂದರ್ಶಿಸಿ, ವಿಸ್ತೃತವಾದ ವರದಿಯೊಂದನ್ನು ನೀಡಲಿದೆ. ಶ್ರೀಯುತ ಪ.ಮಲ್ಲೇಶ್ ಅವರ ಅಧ್ಯಕ್ಷತೆಯಲ್ಲಿ, ರಚಿತವಾಗಿರುವ ಹಾಲಿಸಮಿತಿಯು ಆಂದೋಲನದ ನೀಲಿನಕ್ಷೆಯನ್ನು ತಯಾರಿಸಲಿದೆ. ಸಮಿತಿಯ ವರದಿಯನ್ನಾಧರಿಸಿ ರಾಷ್ಟ್ರೀಯ ಗ್ರಾಮೋದ್ಯೋಗ ಆಂದೋಲನಕ್ಕೆ ಚಾಲನೆ ನೀಡಲಾಗುವುದು.

ಆಂದೋಲನದ ಉದ್ದೇಶ

೧. ಭಾರತದ ಗ್ರಾಮೀಣ ಪ್ರದೇಶಗಳಲ್ಲಿ, ಪರಿಸರ ಸ್ನೇಹಿಯಾದ ಹಾಗೂ ಸ್ಥಳೀಯ ಸಂಪನ್ಮೂಲಗಳನ್ನು ಮಾತ್ರವೇ ಬಳಕೆಮಾಡುವ, ಅತಿ ಸಣ್ಣ ಉದ್ದಿಮೆಗಳ ಸ್ಥಾಪನೆಗೆ ಪ್ರೇರಣೆ ನೀಡುವುದು.

೨. ಗ್ರಾವೋದ್ಯೋಗಗಳ ಸ್ಥಾಪನೆಯ ಮೂಲಕ ಗ್ರಾಮೀಣ ಬಡವರಿಗೆ ಪೂರಕವರಮಾನ ಮೂಲವೊಂದು ಲಭ್ಯವಾಗುವಂತೆ ಮಾಡುವುದು.

೩. ಗ್ರಾಮೀಣ ಬಡವರ 'ನಗರವಲಸೆ' ತಡೆಗಟ್ಟುವುದು.

೪. ಕೃಷಿ ಹಾಗೂ ಗ್ರಾಮೋದ್ಯೋಗಗಳ ಆರ್ಥಿಕತೆಯನ್ನಾಧರಿಸಿದ, ಅಹಿಂಸಾತ್ಮಕವಾದ ಹಾಗೂ ಸುಸ್ಥಿರವಾದ ಸಮಾಜವೊಂದರ ನಿರ್ಮಾಣ ಮಾಡುವುದು.

ಆಂದೋಲನದ ವಿಧಾನ

ಇದು ನಗರದ ಪ್ರಜ್ಞಾವಂತರು ಹಾಗೂ ಗ್ರಾಮೀಣ ಬಡಜನರ ಸಂಯುಕ್ತ ಚಳುವಳಿಯಾಗಿರುತ್ತದೆ. ಪೇಟೆ ಹಾಗೂ ಹಳ್ಳಿಯ ಜನರು ಈ ಆಂದೋಲನದ ಮೂಲಕ ಪರಸ್ಪರರನ್ನು ಅರಿತುಕೊಳ್ಳಲಿದ್ದಾರೆ ಹಾಗೂ ಪರಸ್ಪರರಿಂದ ಕಲಿಯಲಿದ್ದಾರೆ. ನಗರಜೀವಿಗಳು ಗ್ರಾಮಸ್ಥರಿಂದ ಶ್ರಮಸಹಿತ ಸರಳಜೀವನವನ್ನು ಕಲಿಯಲಿದ್ದಾರೆ, ಗ್ರಾಮಸ್ಥರು ನಗರಜೀವಿಗಳಿಂದ ವೈಚಾರಿಕತೆ ಮತ್ತು ಉದ್ಯಮಶೀಲತೆಗಳ ತರಬೇತಿಯನ್ನು ಪಡೆಯಲಿದ್ದಾರೆ.

ಆಂದೋಲನ ಏಕೆ?

ಇತ್ತ ಗ್ರಾಮಗಳು ಬರಿದಾಗುತ್ತಿವೆ, ಅತ್ತ ನಗರಗಳು ಮಿತಿಮೀರಿ ಬೆಳೆಯುತ್ತಿವೆ. ಕೃಷಿಕಾರ್ಮಿಕರು ಸಣ್ಣರೈತರು ಮಳೆ ಆಧಾರಿತ ಕೃಷಿಕರು ಹಾಗೂ ಕುಶಲಕರ್ಮಿಗಳು

ತಮ್ಮ ಪಾರಂಪರಿಕ ವೃತ್ತಿಗಳನ್ನು ತೊರೆದು, ನಗರಪ್ರದೇಶಗಳಿಗೆ ಉದ್ಯೋಗ ಅರಸಿಕೊಂಡು ವಲಸೆ ಹೋಗುತ್ತಿದ್ದಾರೆ. ಸಮರ್ಥ ಸಾಮಾಜಿಕ ಚಳುವಳಿಯೊಂದರ ಅನುಪಸ್ಥಿತಿಯಲ್ಲಿ ಸರ್ಕಾರಗಳ ಬಡತನ ನಿರ್ಮೂಲನೆಯ ಕಾರ್ಯಕ್ರಮಗಳು ಬಡಜನರ ವಲಸೆ ತಡೆಯುವಲ್ಲಿ ವಿಫಲವಾಗುತ್ತಿವೆ, ಹಾಗೂ ಬಡವರ ಚಿತ್ತಸ್ಥೈರ್ಯವನ್ನು ಕುಗ್ಗಿಸಿ, ಅವರನ್ನು ಭಿಕ್ಷುಕರನ್ನಾಗಿಸುತ್ತಿವೆ.

ಅತ್ತ ನಗರಗಳು ಅಹಂಕಾರದಿಂದ ಬೀಗತೊಡಗಿವೆ. ಗ್ರಾಮೀಣ ಬಡಜನರ ವಲಸೆಯು ಆರ್ಥಿಕ ಪ್ರಗತಿಗೆ ಅತ್ಯಗತ್ಯವಾದ ಒಂದು ಸಾಮಾಜಿಕ ಪ್ರಕ್ರಿಯೆ ಎನ್ನುವ ವಿತಂಡವಾದವೊಂದು ನಾಯಕರುಗಳಲ್ಲಿ ಮನೆ ಮಾಡಿದೆ. ಮಾನವ ಪ್ರಗತಿಯೆಂದರೆ ಅನಿರ್ಬಂಧಿತ ಉತ್ಪಾದನೆಯೇ ಹೊರತು ಉದ್ಯೋಗಸೃಷ್ಟಿಯಲ್ಲ ಎಂಬ ತಪ್ಪುಕಲ್ಪನೆ ಅವರಲ್ಲಿದೆ. ನಾಗರೀಕ ಸಮಾಜದ ಎಲ್ಲ ರಂಗಗಳನ್ನೂ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕರಂಗಗಳನ್ನು, ಮಾರುಕಟ್ಟೆಯಶಕ್ತಿ ಆವರಿಸಿಕೊಂಡು ಕುಳಿತಿದೆ.

ಇಡೀ ಮನುಕುಲವೇ ಸುಲಭವೃತ್ತಿಗಳ ವ್ಯಾಮೋಹಕ್ಕೆ ಸಿಲುಕಿದೆ. ಶ್ರೀಮಂತ ಹಾಗೂ ಬಡವರ ನಡುವಿನ ಅಂತರ ಹೆಚ್ಚುತ್ತಲೇ ನಡೆದಿದೆ. ಗಂಭೀರವಾದ ಪರಿಸರಬಿಕ್ಕಟ್ಟು, ನೈತಿಕಬಿಕ್ಕಟ್ಟು ಹಾಗೂ ಸಾಮಾಜಿಕ ಬಿಕ್ಕಟ್ಟುಗಳಿಗೆ ಇದು ಕಾರಣವಾಗಿದೆ. ರಾಷ್ಟ್ರೀಯ ಗ್ರಾಮೋದ್ಯೋಗ ಆಂದೋಲನವು ಈ ಎಲ್ಲ ಬಿಕ್ಕಟ್ಟುಗಳಿಗೆ ಪರಿಹಾರ ನೀಡಬಲ್ಲದು ಎಂದು ನಾವು ನಂಬುತ್ತೇವೆ.

ಯುವಕರ ಆಂದೋಲನವಾಗಿ ಗ್ರಾಮೋದ್ಯೋಗ

ಯುವಕರು ಹಾಗೂ ವಿದ್ಯಾರ್ಥಿಗಳನ್ನು ರಾಷ್ಟ್ರೀಯ ಗ್ರಾಮೋದ್ಯೋಗ ಆಂದೋಲನದ ಮುಂಚೂಣಿಗೆ ತರಬೇಕೆಂಬುದು ನಮ್ಮಗುರಿಯಾಗಿದೆ. ಆಂದೋಲನವು ಯುವಜನತೆಗೆ ಸಮರ್ಥವಾದ ವ್ಯಕ್ತಿತ್ವವಿಕಾಸ ತರಭೇತಿ ಹಾಗೂ ನಾಯಕತ್ವ ತರಭೇತಿಗಳನ್ನು ನೀಡಬಲ್ಲುದಾಗಿದೆ.

ಬದನವಾಳು ಮಾದರಿ

ರಾಷ್ಟ್ರೀಯ ಗ್ರಾಮೋದ್ಯೋಗ ಆಂದೋಲನಕ್ಕೆ ಪ್ರೇರಣೆ ನೀಡಿದ, ಈಗ ಪಾಳು ಬಿದ್ದಿರುವ, ಬದನವಾಳು ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರವನ್ನು ಪುನಶ್ಚೇತನಗೊಳಿಸುವುದೆಂದು ಬದನವಾಳು ಗ್ರಾಮಸ್ಥರು ನಿರ್ಧರಿಸಿದ್ದಾರೆ. ಬದನವಾಳು ಸತ್ಯಾಗ್ರಹ ಸಮಿತಿಯ ಕಾರ್ಯಕರ್ತರು ಗ್ರಾಮಸ್ಥರ ಬೆಂಬಲಕ್ಕೆ ನಿಂತು ಬದನವಾಳು ಕೇಂದ್ರವನ್ನು ಒಂದು ಮಾದರಿಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲಿದ್ದಾರೆ.

ಪ್ರತಿಧ್ವನಿ

ಕಳ್ಳರನ್ನಾಗಿಸುವ ಪರಿ

ಮನುಷ್ಯನ ಜೀವನಕ್ರಮದಲ್ಲಿ ಸರ್ಕಾರವೆಂಬ ಯಂತ್ರ ಸ್ವಾಭಾವಿಕ ಬದುಕಿನ ಕ್ರಮವನ್ನು ಕಳ್ಳತನದ ಕ್ರಮವನ್ನಾಗಿಸುತ್ತಿರುವ ವಿಪರ್ಯಾಸಗಳು ಅಸಹಜವೂ, ಮಾರಕವೂ ಎಂದೆನಿಸುತ್ತದೆ. ಉದಾಹರಣೆಗೆ ಹೆಂಡದ ತಯಾರಿಕೆಯಲ್ಲಿ ಭಟ್ಟಿ ಇಳಿಸಿ ತಯಾರಿಸುತ್ತಿದ್ದ ಗ್ರಾಮೀಣ ಉತ್ಪಾದನೆಯ ಕ್ರಮವನ್ನು ಬ್ರಿಟೀಷರು ತಮ್ಮ ಆದಾಯಕ್ಕೆ ಧಕ್ಕೆ ಬರುತ್ತಿದೆ ಎಂದು ಭಾವಿಸಿ ಅದನ್ನು ಕಾನೂನು ಬಾಹಿರ ಚಟುವಟಿಕೆಯೆಂದು ಪರಿಗಣಿಸಿ, ಬೇಟೆಯಾಡಿ ಬಂಧಿಸತೊಡಗಿದರು. ಸಮಾಜಕ್ಕೆ ಒಪ್ಪಿಗೆಯಾಗಿದ್ದ ಈ ಚಟುವಟಿಕೆ ಒಮ್ಮೆಲೆ ಅಕ್ರಮವಾಯಿತು. ಉತ್ಪಾದನೆಯಲ್ಲಿ ತೊಡಗಿದ್ದವರು ಕಳ್ಳರು ಎಂದು ಕಳಂಕಿತರಾದರು. ಸ್ವಾತಂತ್ರ್ಯಾನಂತರ ನಮ್ಮ ಸರ್ಕಾರಗಳು ಈ ಕ್ರಮವನ್ನು ಮುಂದುವರೆಸಿದವು. ಉತ್ಪಾದನೆಯಲ್ಲಿ ತೊಡಗಿದ್ದವರು ಮತ್ತು ಗ್ರಾಹಕರು ಪೋಲೀಸರ ಕಣ್ಣು ತಪ್ಪಿಸಿ ಭಯದ ನೆರಳಿನಲ್ಲಿ ಈ ಚಟುವಟಿಕೆಯನ್ನು ಕೈಗೊಳ್ಳಬೇಕಾಯಿತು. ಒಂದು ಕಾಲದ ಸಮಾಜ ಮಾನ್ಯ ಜೀವನ ಕ್ರಮ ಕಳ್ಳ ಬದುಕಾಗುವುದು ಎಷ್ಟು ಸರಿ.

ಇಂಥದೆ ಒಂದು ಬದುಕಿನ ಕ್ರಮ ಈಗ ಕಳ್ಳ ದಂಧೆಯಾಗಿದೆ. ಕಟ್ಟಡ ಕಟ್ಟಲು ಅಗತ್ಯವಾದ ಮರಳನ್ನು ಕೆರೆ, ನದಿಗಳ ಅಂಗಳ ಇತ್ಯಾದಿಗಳಿಂದ ಅಗತ್ಯವನ್ನು ಪೂರೈಸಿಕೊಳ್ಳುತ್ತಿದ್ದ ಜನ ಎತ್ತಿನಗಾಡಿಗಳಲ್ಲಿಯೊ, ಲಾರಿಗಳಲ್ಲಿಯೊ ಮರಳನ್ನು ಸಾಗಿಸುತ್ತಿದ್ದರು. ಗಾಡಿ ಮತ್ತು ಲಾರಿಯ ಗಾತ್ರ ಅಗತ್ಯಕ್ಕೆ ತಕ್ಕಂತೆ ಇರುತ್ತಿತ್ತು. ಇದೊಂದು ಸಾಮಾಜಿಕ ವ್ಯವಹಾರದ ಭಾಗವಾಗಿ ಉದ್ಯಮದ ಸ್ವರೂಪವನ್ನೇ ಪಡೆದಿತ್ತು. ಕೆಲವು ವರ್ಷಗಳವರೆಗೂ ಸಮಾಜ ಮಾನ್ಯ ಉದ್ಯಮವಾಗಿತ್ತು, ಯಾವ ತಕರಾರು ಇಲ್ಲದೆ ಸಾಮಾಜಿಕ ಚಟುವಟಿಕೆಯ ಸಕ್ರಮ ಭಾಗವಾಗಿತ್ತು. ಹಣದ ದುರಾಸೆಯುಳ್ಳವರ ಹದ್ದಿನ ಕಣ್ಣು ಈ ಚಟುವಟಿಕೆಯ ಮೇಲೆ ಬಿತ್ತು. ಅಗತ್ಯಕ್ಕಷ್ಟೇ ಪೂರೈಸಿಕೊಳ್ಳಲಾಗುತ್ತಿದ್ದ ಈ ಪದಾರ್ಥವು ದುರಾಸೆಯ ಜನರ ಹತೋಟಿಗೆ ಹಸ್ತಾಂತರವಾಯಿತು. ಸರ್ಕಾರ ಮರಳು ತೆಗೆಯುವುದನ್ನು ತಡೆಯಲು ಅದನ್ನು ತೆಗೆಯುವುದು ಮತ್ತು ಸಾಗಿಸುವುದು ಅಕ್ರಮ ವ್ಯವಹಾರವೆಂದು ಘೋಷಿಸಿತು. ನಾಗರೀಕ ಜಗತ್ತಿನ ನಿರ್ಮಾಣದಲ್ಲಿ ತೊಡಗಿರುವ ಮಂದಿ ಇಂದು ಕಳ್ಳರೆಂದು ಕರೆಯಲ್ಪಟ್ಟಿದ್ದಾರೆ. ಮರಳು ಅಗತ್ಯ ಸಾಮಗ್ರಿ. ನಿರಂತರ ನಿರ್ಮಾಣ ಯೋಜನೆಯ ಅನಿವಾರ್ಯವಾದ ವಸ್ತು. ಅದನ್ನು ಪೂರೈಸುತ್ತಿರುವ ಜನರು ತಮ್ಮ ಉದ್ಯೋಗ ಬಿಡುವುದಿಲ್ಲ. ಸರ್ಕಾರದ ಕಣ್ಣು ತಪ್ಪಿಸಿ ಈ ಉದ್ಯಮ ಮುಂದುವರೆಯುತ್ತದೆ. ಹೀಗೆ ಜೀವನ ಕ್ರಮದ ಸಕ್ರಮಭಾಗ ಅಕ್ರಮದಾರಿ ಹಿಡಿಯುತ್ತದೆ. ಈ ವಿಪರ್ಯಾಸದ ಹೊಣೆ ಯಾರದು?

– ನಾ.ಸು.ನಾಗೇಶ್, ನಾಗಮಂಗಲ

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ.ಆರ್.ನಾಗರಾಜು – ಕೊಳ್ಳೇಗಾಲ

ಶ್ರೀ.ಟಿ.ವಿಜಯಕುಮಾರ – ಮೈಸೂರು

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ.ಬಿ.ಎಸ್.ವಿನಯ್ – ಮೈಸೂರು

ಶ್ರೀ.ಬಾಪು ಹೆದ್ದೂರು ಶೆಟ್ಟಿ, ಶ್ರೀ.ಅಶ್ವತ್ಥ ನಾರಾಯಣ – ಬೆಂಗಳೂರು

ಶ್ರೀ.ಕೆ.ವೆಂಕಟರಾಜು – ಚಾಮರಾಜನಗರ

ಶ್ರೀ.ಕೆ.ರಾಮೇಗೌಡ – ಸಂಗಾಪುರ

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು


"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ. ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ



KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ಶ್ರೀ

515 ಆರ್.ನಾಗರಾಜು
ರಾಘವೇಂದ್ರ ಟೆಕ್ಸ್‌ಟೈಲ್,
ಸಂಖ್ಯೆ.19,
ಎಸ್.ಸಿ.ಕೆ.ಎಮ್.ರೋಡ್,
ಕೊಳ್ಳೇಗಾಲ – 571440
ಚಾಮರಾಜನಗರ ಜಿಲ್ಲೆ.
9916226039(ಮೊ)

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.net
Printed at chandragiri printers, Mandya- Mob: 9945651584, 9739743237